ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 47 | ನವೆಂಬರ್ 23, 1980 | ಬೆಲೆ : 50 ಪೈಸೆ

ಭಾರತ - ಚೀನಾ ಸಂಬಂಧ

ಭಾರತ ಮತ್ತು ಚೀನಾ ದೇಶಗಳ ನಡುವಿನ ಸಂಬಂಧಗಳ ಸುಧಾರಣೆಗೆ ಈಚೆಗೆ ಪ್ರಯತ್ನಗಳು ನಡೆಯುತ್ತಿರುವುದು ಸ್ವಾಗತಾರ್ಹವಾಗಿವೆ. ಸ್ವಾತಂತ್ರ್ಯಾನಂತರ ಎರಡೂ ದೇಶಗಳೂ ನಿಕಟ ಸಂಬಂಧ ಬೆಳೆಸಿಕೊಂಡು ಎಲ್ಲ ಕ್ಷೇತ್ರಗಳಲ್ಲೂ ಸ್ನೇಹಭಾವದಿಂದ ವರ್ತಿಸಿದ್ದಲ್ಲದೆ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಅಲಿಪ್ತ ರಾಷ್ಟ್ರಗಳನ್ನು ಒಟ್ಟುಸೇರಿಸಿ ಪಂಚಸೂತ್ರಗಳ ಆಧಾರದಲ್ಲಿ ಐಕ್ಯತೆಯನ್ನು ಸಾಧಿಸಲು ಹೋರಾಡಿವೆ. 1959ರಲ್ಲಿ ಗಡಿ ವಿವಾದವೆದ್ದುದರಿಂದ ನಮ್ಮ ಮಧ್ಯೆ ವೈಷಮ್ಯ ಬೆಳೆಯಿತು. ಆದರೆ ಚಾರಿತ್ರಿಕವಾಗಿ ಹೀಗಿರಲು ಸಾಧ್ಯವಿಲ್ಲವೆಂದು ಎರಡು ರಾಷ್ಟ್ರಗಳೂ ಮನಗಂಡು ಈಗ ನಾಲ್ಕೈದು ವರ್ಷಗಳಿಂದ ತಮ್ಮ ಸಂಬಂಧಗಳನ್ನು ಸುಧಾರಿಸಲು ಪ್ರಯತ್ನಗಳು ನಡೆಸುತ್ತಿವೆ.

ಈ ಸಂದರ್ಭದಲ್ಲಿ ಚೀನಾ ದೇಶದ ವಿದೇಶಾಂಗ ಉಪಸಚಿವರಾದ ಶ್ರೀ ಹಾನ್ ನಿಯಾನ್ ಲಾಂಗ್‌ರವರು ಇತ್ತೀಚೆಗೆ ಪೀಕಿಂಗ್‌ನಲ್ಲಿ ಭಾರತದ ಯು. ಎನ್. ಐ. ಬಾತ್ಮೀದಾರರಿಗೆ ಕೊಟ್ಟ ಸಂದರ್ಶನದಲ್ಲಿ "ಚೀನವು ಯಾವುದೇ ಗಡಿ ತಂಟೆಗೆ ಪ್ರಚೋದನೆಯನ್ನೆಂದೂ ನೀಡುವುದಿಲ್ಲ"ವೆಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಕೆಲವು ದಿವಸದ ಹಿಂದೆ ಚೀನದೊಳಗೆ ಪ್ರವೇಶಿಸಿದ 40 ಸಶಸ್ತ್ರ ಭಾರತ ಸೈನಿಕರು "ತಪ್ಪು ತಿಳುವಳಿಕೆಯಿಂದ ಹೋಗಿರುತ್ತಾರೆಂದು" ಭಾರತವು ತಿಳಿಸಿದಾಗ ಅವರನ್ನು ಭಾರತಕ್ಕೆ ವಾಪಸ್ ಕಳಿಸಿರುವುದಾಗಿ ಅವರು ಹೇಳಿದರು. ಈ ತರದ ಘಟನೆಗಳನ್ನು ತಪ್ಪಿಸಲು ಗಡಿಯುದ್ದಕ್ಕೂ 15 ರಿಂದ 30 ರಷ್ಟು ಕಿಲೋಮೀಟರ್‌ನಷ್ಟು ಅಗಲದ ಪ್ರದೇಶವನ್ನು ನಿಶ್ಶಸ್ತ್ರೀ ಪ್ರದೇಶವೆಂಬುದಾಗಿ ಘೋಷಿಸಬಾರದೆಂದು ನಮ್ಮ ಬಾತ್ಮೀದಾರರು ಕೇಳಿದಾಗ ಚೀನವು ಈ ಸಲಹೆಯನ್ನು ಹಿಂದೆಯೇ ಮಾಡಿದೆಂದು ಸಚಿವರು ಹೇಳಿದರು. ಗಡಿ ಪ್ರಶ್ನೆಯನ್ನು ಮಾತುಕತೆ ಮೂಲಕ ಬಗೆಹರಿಸಲು ಸಾಧ್ಯವೆಂಬುದಾಗಿ ಒತ್ತಿ ಹೇಳಿದ್ದಲ್ಲದೆ ಈ ಪ್ರಶ್ನೆಯ ಪರಿಹಾರಕ್ಕೆ ಪ್ರಯತ್ನ ನಡೆಸುವಾಗಲೇ ಇತರ ಪ್ರಶ್ನೆಗಳ ಬಗ್ಗೆ-ವಾಣಿಜ್ಯ, ಆರ್ಥಿಕ ಮುಂತಾದ ವಿಷಯಗಳಲ್ಲಿ-ನಿಕಟ ಸಂಬಂಧ ಬೆಳೆಸಲು ಪ್ರಯತ್ನಿಸಬೇಕೆಂದು ಅವರು ಕೋರಿದ್ದಾರೆ.

ಸಂಪಾದಕೀಯ

ಇದನ್ನು ನಾವು ಸ್ವಾಗತಿಸುತ್ತೇವೆ. ಭಾರತ ಸರಕಾರವು ಕೂಡಲೇ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕೆಂದೂ, ಚೀನಾದೊಡನೆ ಎಲ್ಲ ಕ್ಷೇತ್ರಗಳಲ್ಲೂ ಹೆಚ್ಚಿನ ಸಹಕಾರ ಬೆಳೆಸಲು ಕ್ರಮ ತೆಗೆದುಕೊಳ್ಳಬೇಕೆಂದೂ ನಾವು ಒತ್ತಾಯಪಡಿಸುತ್ತೇವೆ 60 ಕೋಟಿ ಭಾರತೀಯರೂ 100 ಕೋಟಿ ಚೀನೀಯರೂ ಒಂದಾದರೆ ಜಗತ್ತಿನ ರಾಜಕೀಯದಲ್ಲಿ ಮಹತ್ವದ ಬದಲಾವಣೆ ತರಲು ಸಾಧ್ಯ. ಸಾಮ್ರಾಜ್ಯಶಾಹಿ ಯುದ್ಧಕೋರರನ್ನು ಎದುರಿಸಿ ವಿಶ್ವಶಾಂತಿ ಸ್ಥಾಪಿಸಲು ಇದು ಸಹಾಯಕವಾಗುವುದು. ●

ರೈತ ಹೋರಾಟದಲ್ಲಿ ರಾಜಕೀಯ ಆಪಾದನೆ

ನ. ೧೭ ರಂದು ಪ್ರಾರಂಭವಾದ ಚಳಿಗಾಲದ ಸಂಸತ್ ಅಧಿವೇಶನದಲ್ಲಿ, ರಾಷ್ಟ್ರದ ವಿವಿಧ ಕಡೆ ನಡೆಯುತ್ತಿರುವ ರೈತ ಚಳುವಳಿಯನ್ನು ಕೇಂದ್ರ ವ್ಯವಸಾಯ ಮಂತ್ರಿ ವಿಶ್ಲೇಷಿಸಿದ ಬಗೆ ಇದು.

ಮಹಾರಾಷ್ಟ್ರ, ಕರ್ನಾಟಕ ಮುಂತಾದ ಕಡೆ ವ್ಯವಸಾಯ ವೆಚ್ಚಕ್ಕನುಗುಣವಾಗಿ ಬೆಲೆಯನ್ನು ನಿರ್ಧರಿಸಬೇಕೆಂಬ ಮುಖ್ಯ ಬೇಡಿಕೆಯನ್ನು ಮುಂದಿಟ್ಟು ಅಭೂತಪೂರ್ವ ಚಳುವಳಿ ನಡೆಯುತ್ತಿರುವುದನ್ನು ಪ್ರಸ್ತಾಪಿಸಿದ ರಾಜ್ಯಸಭಾ ಸದಸ್ಯ ಕಾಂ. ಹರೇಕೃಷ್ಣ ಸಿಂಗ್ ಸುರಜೀತ ಮುಂತಾದವರಿಗೆ ಉತ್ತರಿಸುತ್ತಿದ್ದ ವ್ಯವಸಾಯ ಮಂತ್ರಿ ಶ್ರೀ ರಾವ್‌ಬೀರೇಂದ್ರಸಿಂಗರು ಈ ಚಳುವಳಿಯ ನೈತಿಕತೆಯನ್ನು ಪ್ರಶ್ನಿಸಿ ಸರಕಾರದ ದಿವಾಳಿಖೋರ ನೀತಿಗೆ ಉದಾಹರಣೆಯಾಗಿದ್ದಾರೆ.

ವ್ಯವಸಾಯ ಬೆಲೆ ಆಯೋಗ ಹೊಸದಾಗಿ ಶಿಫಾರಸು ಮಾಡಿದ ಬೆಲೆ ಬತ್ತಕ್ಕೆ ಕ್ವಿಂಟಾಲಿಗೆ ನೂರು ರೂ. ಇತರ ಧಾನ್ಯಗಳಿಗೆ 97-50 ರೂ. ಆದರೆ ಆಯೋಗಕ್ಕಿಂತ ಹೆಚ್ಚು ಬೆಲೆಯನ್ನು ಎಂದರೆ ಬತ್ತಕ್ಕೆ 150 ರೂ. ಇತರ ಧಾನ್ಯಗಳಿಗೆ 150ರೂ. ಎಂದು ಸರಕಾರ ನಿಗದಿಪಡಿಸಿತ್ತು.

ಸರ್ಕಾರವು ಕಡಲೇಕಾಯಿ, ಸೂರ್ಯಕಾಂತಿ ಬೀಜ, ಸೋಯಾ ಅವರೆ ಇವುಗಳಿಗೂ ಕಳೆದ ವರ್ಷಕ್ಕಿಂತ ಹೆಚ್ಚಿಗೆ ಮಾಡಿದ್ದರೂ ಕಬ್ಬಿಗೆ ಮಾತ್ರ ಆಯೋಗ ಸೂಚಿಸಿದ್ದಕ್ಕಿಂತ ಐವತ್ತು ಪೈಸೆ ಹೆಚ್ಚಿಸಿತ್ತು.

ಉತ್ಪಾದನಾ ವೆಚ್ಚದಲ್ಲಿ ಏರಿಕೆಯಾಗಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಿವೆ. ರಾಸಾಯನಿಕ ಗೊಬ್ಬರದ ಬೆಲೆ ತುಂಬಾ ಹೆಚ್ಚಾಗಿದೆ. ಇದೊಂದರಿಂದಲೇ ಬತ್ತದ ಉತ್ಪಾದನಾ ವೆಚ್ಚ ಕ್ವಿಂಟಾಲಿಗೆ 11-50 ರೂ. ಹೆಚ್ಚಾಗಿದೆ. ಇದಲ್ಲದೇ ಡಿಸೇಲ್, ಕೀಟೌಷದ, ಕಳೆನಾಶಕಗಳ ಬೆಲೆಯೂ ಹೆಚ್ಚಾಗಿದೆ. ಹೀಗೆ ಉತ್ಪಾದನಾ ವೆಚ್ಚದಲ್ಲಿ ವಿಪರೀತ ಹೆಚ್ಚಳವಾದಿದ್ದರೂ ಬೆಲೆ ಆಯೋಗ ಬತ್ತಕ್ಕೆ ಕ್ವಿಂಟಾಲಿಗೆ ಐದು ರೂ. ಮಾತ್ರ ಹೆಚ್ಚಿಸಲು ಶಿಫಾರಸು ಮಾಡಿತ್ತು. ಸರ್ಕಾರ ಇದಕ್ಕೆ ಇನ್ನೈದು ರೂಪಾಯಿ ಸೇರಿಸಿತ್ತು. ವ್ಯವಸಾಯ ಬೆಲೆ ಆಯೋಗದ ಸದಸ್ಯ

(ಕಡೆಯ ಪುಟ ನೋಡಿ)

ಕೇಂದ್ರದ ಮಲತಾಯಿ ಧೋರಣೆ

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಪುನರಾಭಿವೃದ್ಧಿ ಖಾತೆಯು ಕೂಲಿಗೆಕಾಳು ಕಾರ್ಯಕ್ರಮಕ್ಕಾಗಿ ೧.೪ ಮಿಲಿಯನ್ ಟನ್ನುಗಳಷ್ಟು ಧಾನ್ಯವನ್ನು ಬಿಡುಗಡೆ ಮಾಡಿತು. ಬಿಡುಗಡೆ ಮಾಡಲಾದ ಒಟ್ಟು ಧಾನ್ಯದಲ್ಲಿ ಕಾಂಗ್ರೆಸ್ (ಐ)ಅಲ್ಲದ ಎರಡು ರಾಜ್ಯಗಳಾದ ಪಶ್ಚಿಮ ಬಂಗಾಳ ಹಾಗೂ ತಮಿಳುನಾಡು ರಾಜ್ಯಗಳು ಕ್ರಮವಾಗಿ ೨೦,೦೦೦ ಟನ್ ಮತ್ತು ೨೭,೦೦೦ ಟನ್ನು ಧಾನ್ಯವನ್ನು ಪಡೆದವು. ಒಟ್ಟು ಬಿಡುಗಡೆಯಲ್ಲಿ ಇದು ಕೇವಲ ಶೇಕಡಾ ೨ರಷ್ಟು ಮಾತ್ರ. ಉಳಿದ ಧಾನ್ಯಗಳನ್ನು ಕಾಂಗ್ರೆಸ್ (ಐ) ಅಧಿಕಾರವಿರುವ ರಾಜ್ಯಗಳಿಗೆ ಮೀಸಲಿಡಲಾಗಿದೆ.

ಈ ಮೇಲಿನ ರಾಜ್ಯಗಳಲ್ಲಿ ಕಾರ್ಯಕ್ರಮವು ಜಿಲ್ಲಾ ಮ್ಯಾಜಿಸ್ಟ್ರೇಟುಗಳ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಲಾಗಿದೆ ಅವರು ಕಂಟ್ರಾಕ್ಟರುಗಳ ಮೂಲಕ ಧಾನ್ಯವನ್ನು ವಿತರಣೆ ಮಾಡುತ್ತಾರೆ. ಧಾನ್ಯವನ್ನು ಕಂಟ್ರಾಕ್ಟರುಗಳಿಗೆ ಒಪ್ಪಿಸಬೇಕೆಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳು ಭಾರತದ ಆಹಾರ ಕಾರ್ಪೊರೇಷನ್ನಿಗೆ ಸೂಚಿಸಿದ ಕೂಡಲೇ ಧಾನ್ಯದ ಬಳಕೆಯಾಯಿತೆಂದು ಪರಿಗಣಿಸಲಾಗುತ್ತದೆ.

ಕಂಟ್ರಾಕ್ಟರುಗಳು ಧಾನ್ಯವನ್ನು ವಿತರಣೆ ಮಾಡುತ್ತಾರೆಂಬುದು ಇತರರಿಗೆ ಸಂಬಂಧಿಸಿದುದಲ್ಲ ಎಂದು ಕೇಂದ್ರದ ಅಭಿಮತ.

ಯೋಜನಾ ಆಯೋಗದ ಕಾರ್ಯಕ್ರಮ ನಿರ್ಧಾರಕ ಸಂಸ್ಥೆಯ ವರದಿಯ ಪ್ರಕಾರ "ಕಂಟ್ರಾಕ್ಟರುಗಳಿಗೆ ಒಪ್ಪಿಸಲಾದ ಧಾನ್ಯ ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತದೆ, ಬಡವರಿಗೆ ಹಂಚಲು ಉದ್ದೇಶಿಸಿದ ಧಾನ್ಯ ಅವರಿಗೆ ತಲುಪುತ್ತಲೇ ಇಲ್ಲ" ಎಂಬುದಾಗಿದೆ

ಗ್ರಾಮಾಂತರ ಪುನರಾಭಿವೃದ್ಧಿ ಖಾತೆಯು ಈ ಅಕ್ರಮಗಳನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಕೂಲಿಗೆ ಕಾಳು ಧಾನ್ಯದಿಂದ ಕಂಟ್ರಾಕ್ಟರುಗಳು ಲಾಭ ಸಂಪಾದಿಸುತ್ತಿದ್ದರೆ ಅದರ ಅರ್ಥವಾದರೂ ಏನು? ಬಡವರಿಗೆಂದು ಬಿಡುಗಡೆಯಾದ ಧಾನ್ಯ ಅಪ್ರಾಮಾಣಿಕ ವ್ಯಕ್ತಿಗಳಿಂದ ಕದಿಯಲ್ಪಡುತ್ತಿದ್ದರೆ ಆಳುವ ಪಕ್ಷದ ವರ್ಗಹಿತ ಆ ಮೂಲಕ ನಡೆಯುತ್ತದೆ; ಆದ್ದರಿಂದ ಇಂತಹ ವಿಧಾನಗಳನ್ನು ಪ್ರೋತ್ಸಾಹಿಸಲಾಗಿದೆ.

ಎಡರಂಗ ಸರ್ಕಾರದಲ್ಲಿ ಕೂಲಿಗೆ ಕಾಳು ಕಾರ್ಯಕ್ರಮದ ವಿಧಾನ ಬೇರೆಯಾಗಿದೆ, ಇಲ್ಲಿ ಧಾನ್ಯವನ್ನು ಗ್ರಾಮ ಪಂಚಾಯತುಗಳ ಮೇಲ್ವಿಚಾರಣೆಯಲ್ಲಿ ವಿತರಣೆಯಾಗುತ್ತಿದೆ. ವಿಕೇಂದ್ರೀಕೃತ ಆಡಳಿತವನ್ನು ತೋರಿಕೆಗೆ ಮಾಡದೆ ಪಶ್ಚಿಮ ಬಂಗಾಳ ಸರ್ಕಾರ ಅಧಿಕಾರ ಹಾಗೂ ಹಣಕಾಸನ್ನು ಪಂಚಾಯತುಗಳಿಗೆ ವರ್ಗಾಯಿಸಲಾಗಿದೆ. ಈ ಪಂಚಾಯತುಗಳು ಅಸಂಖ್ಯ ಗ್ರಾಮೀಣ ಬಡಜನರನ್ನು ಪ್ರತಿನಿಧಿಸುತ್ತವೆ.

ಕೂಲಿಗೆ ಕಾಳು ಕ್ರಮವನ್ನು ಜಾರಿಗೆ ತರುವ ಜವಾಬ್ದಾರಿ ಮಾತ್ರ ಪಂಚಾಯತುಗಳಿಗಿಲ್ಲ ಪಂಚಾಯತುಗಳು ಕೇವಲ ಧಾನ್ಯವನ್ನು ಹಂಚುತ್ತಿಲ್ಲ ಜೊತೆಗೆ ಕೇಂದ್ರ ಖಾತೆಗೆ ತಲುಪಬೇಕಾದ ಲೆಕ್ಕಪತ್ರಗಳನ್ನು ರಾಜ್ಯ ಆಡಳಿತಕ್ಕೆ ತಲುಪಿಸುತ್ತವೆ.

ರಾಜ್ಯದಲ್ಲಿ 1977-78, 1978-1979 ಮತ್ತು 1979-80ರಲ್ಲಿ ರಾಜ್ಯವು ಸಂಘಟಿಸಿದ ಕೂಲಿಗೆಕಾಳು ಕಾರ್ಯಕ್ರಮದ ಅದ್ಭುತವಾದ ವಿಧಾನದಿಂದಾಗಿ ಸಾವಿರಾರು ಕೆಲಸದ ಮಾನವ ದಿನಗಳನ್ನು ಸೃಷ್ಟಿಸಲು ಸಾಧ್ಯವಾಯಿತು. ಗ್ರಾಮೀಣ ವೇತನವನ್ನು ಹೆಚ್ಚಿಸಲು ಹಾಗೂ ಹೆಚ್ಚಿನ ಸಂಖ್ಯೆಯ ದೀರ್ಘ ಉತ್ಪಾದವಾಂತಗಳನ್ನು ಗ್ರಾಮೀಣ ಜನರೇ ಪೂರ್ತಿಗೊಳಿಸಲು ಸಾಧ್ಯವಾಯಿತು.

ಕೇಂದ್ರದ ಕಾಂಗ್ರೆಸ್ (ಐ) ಸರ್ಕಾರವು ಇದರಿಂದ ಅತೃಪ್ತಿಗೊಂಡಿತು. ದೊಡ್ಡ ಭೂಮಾಲೀಕರ, ಶ್ರೀಮಂತ ವರ್ತಕರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಪ್ರಯೋಗ ಯಶಸ್ವಿಯಾದುದನ್ನು ಸಹಿಸಲಿಲ್ಲ. ಆದ್ದರಿಂದ ರಾಜ್ಯದಲ್ಲಿ ಕೂಲಿಗಾಗಿ ಕಾಳು ಕಾರ್ಯಕ್ರಮ ಮುಂದುವರಿಯಲು ಅಗತ್ಯವಾದ ಧಾನ್ಯವನ್ನು ಬಿಡುಗಡೆ ಮಾಡದಿರಲು ಕೇಂದ್ರ ಸರ್ಕಾರ ನಿರ್ಧರಿಸಿತು.

ರಾಜ್ಯಕ್ಕೆ ಬಿಡುಗಡೆ ಮಾಡಲಾದ ಒಟ್ಟು ಧಾನ್ಯದ ಶೇಕಡಾ 50

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಕೋಟೇಶ್ವರ :

ಕುಂದಾಪುರ ತಾಲ್ಲೂಕಿನ ಕೋಟೇಶ್ವರ ಗ್ರಾಮದ ಅಂಕದಕಟ್ಟೆಯಲ್ಲಿ ದಿನಾಂಕ 22-10-80 ರಂದು ಯುವಜನ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾದ ಕಾಂ. ಯು. ದಾಸಭಂಡಾರಿಯವರು ವಹಿಸಿದ್ದರು. ಎ. ಕೃಷ್ಣ ಅವರು ಅಧ್ಯಕ್ಷರಾಗುಳ್ಳ ಸಮಿತಿಯೊಂದನ್ನು ರಚಿಸಲಾಯಿತು.

ತುಮಕೂರು :

26-10-80 ರಂದು ನಗರದ ಕಪಾಲಿ ಹೋಟೆಲಿನಲ್ಲಿ, ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ, ದಲಿತ ಸಂಘರ್ಷ ಸಮಿತಿ, ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಸಮುದಾಯ ಮುಂತಾದ ಪ್ರಗತಿಪರ ಸಂಘಟನೆಗಳು ಜೊತೆಗೂಡಿ "ಇಂದಿನ ಸಮಾಜ ಬದಲಾವಣೆಯಲ್ಲಿ ಯುವಜನರ ಪಾತ್ರ" ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ಈ ಸಭೆಯನ್ನು ಉದ್ದೇಶಿಸಿ ಮಣಿಪಾಲದ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಪಿ. ಕೆ. ಆರ್. ವಾರಿಯರ್ ಮತ್ತು ಶ್ರೀಮತಿ ದೇವಿಕಾ ವಾರಿಯರ್ ಮಾತನಾಡಿದರು.

ಶಿವಮೊಗ್ಗ :

ಶಿವಮೊಗ್ಗದ ಸೀಗೆಹಟ್ಟಿಯಲ್ಲಿ ದಿನಾಂಕ 30-10-80 ರಂದು ಉದ್ಯೋಗ ಭದ್ರತಾ ದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಂಗವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸೀಗೆಹಟ್ಟಿ ಶಾಖೆ ಕಾರ್ಯಕರ್ತರು ಸೈಕಲ್ ಮೇಲೆ ಮೆರವಣಿಗೆಯಲ್ಲಿ ತೆರಳಿ ಬೆಂಬಲ ವ್ಯಕ್ತಪಡಿಸಿದರು. ಕಾಂ. ಎಸ್. ಬಿ. ಶಿವಶಂಕರ ಮತ್ತಿತರರು ಪಾಲ್ಗೊಂಡಿದ್ದರು.

ಪುತ್ತೂರು :

1-11-80 ರಂದು ನಗರದ "ಶ್ರೀ ವೆಂಕಟೇಶ್ವರ ಸಾ ಮಿಲ್ ಮತ್ತು ವುಡ್ ಇಂಡಸ್ಟ್ರೀಸ್"ನ ಕಾರ್ಮಿಕರು ಸಂಘವನ್ನು ರಚಿಸಿಕೊಂಡರು. ಕಾರ್ಮಿಕ ಮುಂದಾಳು ಕಾಂ. ಬಿ ರಾಮಕೃಷ್ಣ ಸಂಘವನ್ನು ಉದ್ಘಾಟಿಸಿದರು. ಕಾಂ. ಸೀತಾರಾಮ್ ಕಾರ್ಯದರ್ಶಿಯಾಗಿರುವ ಸಮಿತಿಯೊಂದನ್ನು ರಚಿಸಲಾಯಿತು.

ತಿಪಟೂರು :

ದಿನಾಂಕ 4-11-80 ರಂದು ತಿಪಟೂರ ನಾಗರೀಕರು ಕಾಂ. ಆರ್. ಎಸ್. ಚೆನ್ನಬಸವಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಗರದ ಜನತೆಯ ಅವಶ್ಯಕತೆ ಬೇಡಿಕೆಗಳ ಬಗ್ಗೆ, ರಾಜ್ಯದಲ್ಲಿ ನಡೆಯುತ್ತಿರುವ ರೈತರ ಚಳುವಳಿಗೆ ಬೆಂಬಲ ಸೂಚಿಸಲು ತಾತ್ಕಾಲಿಕ ನಾಗರೀಕ ಸಮಿತಿಯೊಂದನ್ನು ರಚಿಸಿಕೊಂಡರು. ಈ ಸಮಿತಿಗೆ ಅಧ್ಯಕ್ಷರಾಗಿ ಶ್ರೀ ಎಸ್. ಪಿ ಮಹಮ್ಮದ ಮಸ್ತಾನ, ಉಪಾಧ್ಯಕ್ಷರಾಗಿ ಜುಂಜಯ್ಯ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಕೋದಂಡರಾಮಯ್ಯನವರು ಆಯ್ಕೆಯಾಗಿದ್ದಾರೆ.

ಉಪ್ಪಿನಂಗಡಿ :

ದ. ಕ. ಜಿಲ್ಲೆಯ ಉಪ್ಪಿನಂಗಡಿಯ ಶಿವರಾಜ ಮಂದಿರದಲ್ಲಿ ದಿನಾಂಕ 9-11-80 ರಂದು ಮಲೆನಾಡು ವಲಯದ ಹರಿಜನ-ಗಿರಿಜನ ಸಂಘದ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ, ದ. ಕ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕ ಕಾಂ. ರಾಮಕೃಷ್ಣ ಅವರು ಮಾತನಾಡುತ್ತಾ" ಹರಿಜನ-ಗಿರಿಜನ ವರ್ಗಕ್ಕೆ ಸೇರಿದ ನಾವು ದುಡಿಯುವ ಇತರ ಶ್ರಮಜೀವಿಗಳೊಡನೆ ಸೇರಿ ದಲಿತ ಸಮುದಾಯದ ಐಕ್ಯತೆ ಸಾಧಿಸಬೇಕು" ಎಂದರು. ಆರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಎ. ಗೋವಿಂದ ಮಾಸ್ತರ ಸ್ವಾಗತಿಸಿದರು. ಸಂಘದ ಅಧ್ಯಕ್ಷ ಶ್ರೀ ಕೆ. ರಾಮಚಂದ್ರಪ್ಪನವರು ಸಂಘಟನೆಯ ನಿಯಮಾವಳಿ, ಕಾರ್ಯಕ್ರಮಗಳ ವಿವರಣೆ ನೀಡಿದರು.

ಉಡುಪಿ :

9-11-80 ರಂದು ಉಡುಪಿಯಲ್ಲಿ "ದೂರವಾಣಿ ಮತ್ತು ತಂತಿ ಮಜ್ದೂರ್" ಸಂಘದ ವಿಭಾಗದ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿ. ಅಂಗಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ವಲಯದ ಅಧ್ಯಕ್ಷ ಕಾಂ. ಬಿ ರಾಮಕೃಷ್ಣ ಮತ್ತು ಉಡುಪಿಯ ಸಿ ಐ ಟಿ ಯು ವಿನ ಕಾರ್ಮಿಕ ಮುಂದಾಳು ಕಾಂ. ಡೇವಿಡ್ ಕರ್ಕಡ ಆಗಮಿಸಿದ್ದರು. ಅತಿಥಿಗಳಿಬ್ಬರು ಮಾತನಾಡುತ್ತಾ ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು ಫೆಬ್ರವರಿ 81 ರಲ್ಲಿ ರಾಜ್ಯಮಟ್ಟದ ಎರಡನೆ ಸಮ್ಮೇಳನವನ್ನು ಉಡುಪಿಯಲ್ಲಿ ಜರುಗಿಸಲು ನಿರ್ಣಯ ಕೈಗೊಳ್ಳಲು ನಿರ್ಧರಿಸಲಾಯಿತು. ಕೊನೆಗೆ ಕಾಂ. ಪಿ. ಮುಕುಂದನ್ ಧನ್ಯವಾದಗಳನ್ನರ್ಪಿಸಿದರು.

ದೊಡ್ಡಬೆಳವಂಗಲ :

ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದಲ್ಲಿ ದಿನಾಂಕ 7-11-80 ರಂದು ರೈತಸಂಘದ ಸಭೆಯು ನಡೆಯಿತು. ಡಿಸೆಂಬರ್ 10 ರಂದು ಬೆಂಗಳೂರಿನಲ್ಲಿ ನಡೆಯಲಿರುವ ರೈತರ ಜಾಥಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ತೀರ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಎಂ. ಮುನಿರಂಗಯ್ಯನವರು ಅಧ್ಯಕ್ಷರಾಗಿರುವ ರೈತಸಂಘದ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಲಾಯಿತು.

ಹಾಲ್ಗೋನಹಳ್ಳಿ :

ತುಮಕೂರ ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಹಾಲ್ಗೋನಹಳ್ಳಿಯಲ್ಲಿ ದಿನಾಂಕ 9-11-80 ರಂದು ರೈತರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಬಿ. ಜಿ. ಗಂಗಾಧರಯ್ಯ ವಹಿಸಿದ್ದರು. ಹಾಲ್ಗೋನಹಳ್ಳಿಯಲ್ಲಿ ರೈತಸಂಘದ ಶಾಖೆಯನ್ನು ರಚಿಸಲಾಯಿತು. ಕಾಂ. ಎಸ್. ಚುಂಚಯ್ಯ ಅಧ್ಯಕ್ಷರಾಗಿ, ಕಾಂ. ಚಲುವಯ್ಯ ಕಾರ್ಯದರ್ಶಿಯಾಗುಳ್ಳ ಸಮಿತಿಯೊಂದನ್ನು ರಚಿಸಲಾಯಿತು.

ಕಾರವಾರ :

ಬಿಣಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯಲ್ಲಿ ಬೆಲೆಏರಿಕೆಗೆ ಅನುಗುಣವಾಗಿ ತುಟ್ಟಿಭತ್ಯೆ ಕೊಡುವಂತೆ ಕಾರ್ಮಿಕರು ಆಡಳಿತವರ್ಗವನ್ನು ವಿನಂತಿಸಿಕೊಂಡಿದ್ದರು. ಕಾರ್ಮಿಕರ ಕಿವಿಗೆ ಓಗೊಡದರಿಂದ ದಿನಾಂಕ 12-11-80 ರಿಂದ ಮುಷ್ಕರ ಪ್ರಾರಂಭಿಸಿದ್ದಾರೆ. ಹಿಂದಿನ ದಿನ (11-11-80) ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ದಾಂಡೇಲಿಯ ಕಾಂ. ಜಿ. ವಿ. ಪವಾರ ಮತ್ತು ಪೇಪರ ಮಿಲ್ಲಿನ ಕಾರ್ಮಿಕ ಸಂಘದ ಕೋಶಾಧ್ಯಕ್ಷ ಕಾಂ. ಜಹ್ಮಾ ಮಾತನಾಡಿ ಮುಷ್ಕರಕ್ಕೆ ಮಾರ್ಗದರ್ಶನ ನೀಡಿದರು.

●

ಲಂಕೇಶ್ ಮೇಲೆ ಹಲ್ಲೆಯ ಖಂಡನೆ

ಚಿಕ್ಕಮಗಳೂರು :

ಖ್ಯಾತ ಬರಹಗಾರ, ಪತ್ರಕರ್ತ ಶ್ರೀ ಲಂಕೇಶ್ ಮೇಲೆ ಕನ್ನಡ ರಾಜ್ಯೋತ್ಸವ ದಿನದಂದು ನಡೆದ ಅಮಾನುಷ ಹಲ್ಲೆಯನ್ನು "ಚಿಕ್ಕಮಗಳೂರು-ಹಾಸನ ಡಿಸ್ಟ್ರಿಕ್ಟ್ಸ್ ಸಾಮಿಲ್ಸ್ ಅಂಡ್ ಜನರಲ್ ವರ್ಕರ್ಸ್ ಯೂನಿಯನ್" ಕಾರ್ಯದರ್ಶಿ ಕಾಂ. ಎ.ಕೆ ವಿಶ್ವನಾಥ ಉಗ್ರವಾಗಿ ಖಂಡಿಸಿ ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳು ಪತ್ರಿಕಾ ಸ್ವಾತಂತ್ರ್ಯದ ರಕ್ಷಣೆಗೆ ಮುಂದೆ ಬರಬೇಕೆಂದು ಮನವಿ ಮಾಡಿದ್ದಾರೆ.

ಹರಿಹರ :

ದಿನಾಂಕ 6-11-80ರಂದು ಹರಿಹರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಆಶ್ರಯ ಬಹಿರಂಗ ಸಭೆಯನ್ನು ಏರ್ಪಡಿಸಿ ಶ್ರೀ ಲಂಕೇಶ್ ಮೇಲಾದ ದಾಳಿಯನ್ನು ಖಂಡಿಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ನಾರಾಯಣಸಾ, ಕಾಮ್ರೇಡ್ ಇಕ್ಬಾಲ್ ಹುಸೇನ್, ಕಾಂ. ಸದಾಶಿವ, ಕಾಂ. ಮದಾರಸಾಬ ಮತ್ತಿತರರು ಮಾತನಾಡಿ ಕನ್ನಡ ಚಳುವಳಿಗಾರರ ಈ ಕುಕೃತ್ಯವನ್ನು ಉಗ್ರವಾಗಿ ಖಂಡಿಸಿದರು. ಸಭೆಯ ಅಧ್ಯಕ್ಷತೆಯನ್ನು ಹರಿಹರ ಪಾಲಿಫೈಬರ್ಸ್ ಕೆಲಸಗಾರರ ಸಂಘದ ಅಧ್ಯಕ್ಷ ಕಾಂ. ಆನಂದ ವಹಿಸಿದ್ದರು. ಕಾಂ. ಜೋಶಿ ವಂದನಾರ್ಪಣೆ ಮಾಡಿದರು.

ತುಮಕೂರು :

ಲಂಕೇಶ್ ಪತ್ರಿಕೆಯ ಸಂಪಾದಕ ಶ್ರೀ ಲಂಕೇಶರ ಮೇಲೆ ವಾಟಾಳ್ ಶಿಷ್ಯರು ನವೆಂಬರ್ 2ರಂದು ನಡೆಸಿದ ಗೂಂಡಾ ದಾಳಿಯನ್ನು ಪ್ರತಿಭಟಿಸಿ ದಿನಾಂಕ 7-11-80ರಂದು ತುಮಕೂರಿನಲ್ಲಿ ಸಭೆ ನಡೆಯಿತು. ನಗರದ ಶ್ರೀಮತಿ ಸಾವಿತ್ರಮ್ಮನವರ ಕಲ್ಯಾಣ ಮಂಟಪದಲ್ಲಿ ರಾಜಕೀಯ ಪಕ್ಷಗಳ, ವಿವಿಧ ಸಂಘಸಂಸ್ಥೆಗಳ ಸಂಯುಕ್ತ ಕ್ರಿಯಾ ಸಮಿತಿ ಆಶ್ರಯದಲ್ಲಿ ಈ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖಂಡರು ಪತ್ರಿಕಾ ಕಛೇರಿಗಳ ಮೇಲೆ, ಪತ್ರಕರ್ತರ ಮೇಲೆ ನಡೆಯುತ್ತಿರುವ ದಾಳಿಗಳನ್ನು ಉಗ್ರವಾಗಿ ಖಂಡಿಸಿದರು. ●

ವಿಶ್ವಕಥಾಕೋಶದ ಸಂಪುಟಗಳ ಬಿಡುಗಡೆ

ನವೆಂಬರ್ 9 ರಂದು ನಗರದ ಉಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ನವಕರ್ನಾಟಕ ಪ್ರಕಾಶನದವರ ವಿಶ್ವಕಥಾಕೋಶದ ಎರಡನೆಯ ಕಂತಿನ ನಾಲ್ಕು ಸಂಪುಟಗಳನ್ನು ಭಾರತದ ಪ್ರಗತಿಶೀಲ ಲೇಖಕರ ಮಹಾಮಂಡಲದ ಪ್ರಧಾನ ಕಾರ್ಯದರ್ಶಿ ಖ್ಯಾತ ಬರಹಗಾರ ಪ್ರೊ. ಭೀಷಮ ಸಹಾನಿಯವರು ಬಿಡುಗಡೆ ಮಾಡಿದರು.

ಭಾರತ ಮತ್ತು ನೆರೆಹೊರೆಯ ದೇಶಗಳ ಕತೆಗಳನ್ನೊಳಗೊಂಡ "ಸುಭಾಷಿಣಿ"ಎಂಬ, ಇಂಗ್ಲೆಂಡ್ ಕತೆಗಳನ್ನೊಳಗೊಂಡ "ವಿಚಿತ್ರ ಕಕ್ಷಿದಾರ"ವೆಂಬ, ಹಂಗರಿ ಮತ್ತು ರುಮಾನಿಯಾ ದೇಶದ ಕತೆಗಳನ್ನೊಳಗೊಂಡ "ಮಂಜುಹೂವಿನ ಮದುಮಗಳು" ಮತ್ತು ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್ ದೇಶಗಳ ಕತೆಗಳನ್ನೊಳಗೊಂಡ "ಬೂದು ಬಣ್ಣದ ಕಾಂಗರೂ" ಎಂಬಿವೇ ಬಿಡುಗಡೆಯಾದ ನಾಲ್ಕು ಸಂಪುಟಗಳು.

ಪ್ರಾರಂಭದಲ್ಲಿ ವಿಶ್ವಕಥಾಯೋಜನೆಯ ಬಗ್ಗೆ ಬಿಡುಗಡೆಗೆ ಸಿದ್ಧವಾಗಿದ್ದ ಸಂಪುಟಗಳ ಬಗ್ಗೆ ಪ್ರಖ್ಯಾತ ಲೇಖಕ ನಿರಂಜನರು ತುಂಬಾ ರಮ್ಯವಾಗಿ ಪರಿಚಯಿಸಿದರು. ವಿಶ್ವಸಾಹಿತ್ಯವನ್ನು ಕನ್ನಡಕ್ಕೆ ತರುತ್ತಿರುವ ಮಹತ್ವವನ್ನು ಪ್ರೊ॥ ಸಾಹನಿ ಶ್ಲಾಘಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕ ಚಂದ್ರಶೇಖರ ಪಾಟೀಲರು ಮಾತನಾಡುತ್ತಾ ಸಮಾಜವಾದಿ ದೇಶಗಳ ಬರಹಗಾರರು ತಮ್ಮ ದೇಶವನ್ನು ಕಂಡುಕೊಂಡ ಬಗೆಯನ್ನು, ಶೋಷಣೆಯ ಕರಾಳಹಸ್ತದ ವಿರುದ್ಧ ನಡೆದ ಪ್ರತಿಭಟನೆಯ ಸಂದೇಶವನ್ನು ಕನ್ನಡಕ್ಕೆ ತಂದುದರ ಬಗ್ಗೆ ಸಂತಸ ವ್ಯಕ್ತಪಡಿಸಿ ಇಂತಹ ಕೃತಿಗಳು ಸುಲಭ ಬೆಲೆಗೆ ಜನಸಾಮಾನ್ಯರಿಗೆ ದೊರಕಿಸಲು ಯತ್ನಿಸಬೇಕೆಂದು ಕರೆನೀಡಿದರು.

○

ಚಿನ್ನದಗಣಿ ಕಾರ್ಮಿಕರ ಸಂಘದ ಸಭೆ

ಭಾರತ್ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್‌ನ ಸಭೆಯು 8-11-80 ರಂದು ಕೆ. ಜಿ. ಎಫ್.ನಲ್ಲಿ ಸೇರಿತ್ತು. ಸಂಘದ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು. ಬೋನಸ್, ಆರೋಗ್ಯ, ಅಪಘಾತ ಭತ್ಯ, ಕ್ಯಾಂಟೀನ್ ಸೌಲಭ್ಯ, ವೇತನ ಪರಿಷ್ಕರಣ ಮುಂತಾದ್ದರ ಬಗ್ಗೆ ಆಡಳಿತ ವರ್ಗದ ಜೊತೆ ನಡೆಸಿದ ಮಾತುಕತೆಯ ವರದಿಯನ್ನು ಕಾರ್ಯದರ್ಶಿ ಎಸ್. ಶವರಿದಾಸ್ ಮಂಡಿಸಿದರು.

22 ನೇ ನವೆಂಬರ್ ವೇಳೆಗೆ ಬೇಡಿಕೆಗಳು ಈಡೇರದಿದ್ದರೆ 26 ನೇ ನವೆಂಬರ್ ದಿನದಂದು ಒಂದು ದಿನದ ಮುಷ್ಕರ ಹೂಡಲು ಸಂಘದ ಸಭೆಯು ಕಾರ್ಮಿಕರಿಗೆ ಕರೆ ಕೊಟ್ಟಿದೆ. ನಂತರ ನಡೆದ ಬಹಿರಂಗ ಸಭೆಯಲ್ಲಿ ಎಸ್. ಸೂರ್ಯನಾರಾಯಣರಾವ್, ಎಸ್. ಶವರಿದಾಸ್, ಟಿ. ಎಸ್. ಮಣಿ, ಮತ್ತು ವಿ. ಮುತ್ತುಕುಮಾರ್ ಮಾತನಾಡಿ, ಕಾರ್ಮಿಕರು ತಮ್ಮ ರಾಜಕೀಯ ಭಿನ್ನಾಭಿಪ್ರಾಯವನ್ನು ಮರೆತು ಮುಷ್ಕರ ನಿಧಿಗೆ ಹಣ ಕೊಡಬೇಕೆಂದು ಮನವಿ ಮಾಡಿದರು. ಈ ಬೇಡಿಕೆಗಳ ಬಗ್ಗೆ ಉಕ್ಕು ಮತ್ತು ಗಣಿ ಸಚಿವಾಲಯದವರನ್ನು ಭೇಟಿ ಮಾಡಲು ಕಾಂ. ಎಸ್. ಸೂರ್ಯನಾರಾಯಣ ರಾವ್ ದೆಹಲಿಗೆ ತೆರಳಿದ್ದಾರೆ.

●

ಸಿ. ಪಿ. ಐ.ನ ಕೇಂದ್ರಸಮಿತಿಯ ಮುಖಪತ್ರ 'ನ್ಯೂಏಜ್' ತನ್ನ ಅಕ್ಟೋಬರ್ ೨೬ರ ಸಂಚಿಕೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಕೆಲವು ಕುತರ್ಕವೆಬ್ಬಿಸಿದೆ. ಚೀನೀ ಗಣತಂತ್ರದ ಮೂವತ್ತೊಂದನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸಿ. ಪಿ. ಐ. (ಎಂ) ನೀಡಿದ್ದ ಶುಭಾಶಯ ಸಂದೇಶದ ಕುರಿತು ಈ ವಾದವಿವಾದವನ್ನು ಎಬ್ಬಿಸಲಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕುರಿತು ಈ ಬಗೆಯ ಅಸಂಬದ್ಧ ಪ್ರಲಾಪವೆಬ್ಬಿಸುವುದಕ್ಕಾಗಿಯೇ ಎಂಬಂತೆ ಸದಾಕಾಲ ಕಾದುಕೊಂಡಿರುವ ನ್ಯೂಏಜ್‌ನ ಬರಹಗಾರರು ಪೀಪಲ್ಸ್ ಡೆಮಾಕ್ರಸಿಯಲ್ಲಿ ಮುದ್ರಿತವಾದುದನ್ನು ಸರಿಯಾಗಿ ಉದ್ಧರಿಸಿ ಹೇಳುವಷ್ಟು ಸಭ್ಯತೆಯನ್ನಾಗಲೀ ಪ್ರಾಮಾಣಿಕತೆಯನ್ನಾಗಲೀ ತೋರಿಸದಿರುವುದು ವಿಷಾದಕರ. ಪೀಪಲ್ಸ್ ಡೆಮಾಕ್ರಸಿಯಲ್ಲಿ ಪ್ರಕಟಗೊಂಡುದನ್ನು ಹಾಗೆಯೇ ಉದ್ಧರಿಸುವ ಬದಲು ಕೆಲವೊಂದು ಕಪೋಲಕಲ್ಪಿತ ಸಂಗತಿಗಳನ್ನು ದುರುದ್ದೇಶಪೂರ್ವಕವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಆರೋಪಿಸಿ ಬರೆಯಲಾಗಿದೆ. "ಇದೀಗ ಚೀನಾವು ಸೋವಿಯೆತ್ ಒಕ್ಕೂಟದ ವಿರುದ್ಧ ಅಮೇರಿಕನ್ ಸಾಮ್ರಾಜ್ಯಶಾಹಿ ಬಣದೊಂದಿಗೆ ಶಾಮೀಲಾಗಿರುವುದನ್ನು ಸಿ. ಪಿ ಐ. (ಎಂ) ಒಪ್ಪಿಕೊಂಡಿದೆ." ಎಂದು ಸಾರಾಸಾರ ವಿವೇಚನೆಯಿಲ್ಲದೆ ಈ ಲೇಖಕರು ಬರೆದಿದ್ದಾರೆ. "ಸಿ. ಪಿ. ಐ. (ಎಂ) ಸೋವಿಯೆತ್ ಒಕ್ಕೂಟ ಮತ್ತು ಚೀನಾದ ನಡುವೆ ತೋರಿಕೆಯ ತಾಟಸ್ಥ್ಯ ನೀತಿ ಮತ್ತು ಸಮಾನ ಅಂತರದ ನಿಲುಮೆಯನ್ನು ತೋರಿಸುತ್ತಿದೆ," "ಸಿ. ಪಿ. ಐ. ಮಾಡಿದಂತೆ ಚೀನಾವನ್ನು ಖಡಾಖಂಡಿತವಾಗಿ ಟೀಕಿಸಲು ಸಿ. ಪಿ. ಐ. (ಎಂ) ಸಿದ್ಧವಿಲ್ಲ"ವೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಅಗ್ಗದ ಅಪಪ್ರಚಾರ ಮಾಡಿದ್ದಾರೆ.

ದಿವಾಳಿಕೋರ ನೀತಿ

"ಚೀನೀ ಜನತಾ ಪ್ರಜಾಪ್ರಭುತ್ವವು ಸೋವಿಯತ್ ಒಕ್ಕೂಟದ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿ ಬಣದೊಂದಿಗೆ ಶಾಮೀಲಾಗಿದೆ" ಇತ್ಯಾದಿ, ಇತ್ಯಾದಿ ವಾದವನ್ನು ಮಾರ್ಕ್ಸ್‌ವಾದಿ

ಚೀನಾ-ಸೋವಿಯತ್ ಸಾಮರಸ್ಯ ಮರಳಿ ಸ್ಥಾಪನೆಯಾಗುವುದರ ಬಗ್ಗೆ ಮತ್ತು ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಐಕ್ಯದ ಕುರಿತು ಹೃತ್ಪೂರ್ವಕ ಕಳಕಳಿ ಇರುವ ಯಾವೊಬ್ಬನೂ ಈ ಮಾತುಗಳ ಬಗ್ಗೆ ಆಕ್ಷೇಪಣೆ ಎತ್ತಲಾರ. ಸೋವಿಯೆತ್ ಒಕ್ಕೂಟವನ್ನು

ವುದು ಯಾಕೆ? ಮತ್ತು ತನ್ನ ಕುಲಗೆಟ್ಟ ದಿವಾಳಿಕೋರ ನೀತಿಯನ್ನು ಸಿ ಪಿ ಐ (ಎಂ)ನ ಮೇಲೆ ಹೇರಿಸಲು ಹಾತೊರೆಯುತ್ತಿರುವುದು ಯಾಕೆ ಎನ್ನುವುದು ಮಾತ್ರ ನಮಗೆ ಅರ್ಥವಾಗುತ್ತಿಲ್ಲ.

ಸೋವಿಯತ್ ಕಮ್ಯುನಿಸ್ಟ್ ಪಕ್ಷ ಸೋವಿಯತ್ ದೇಶ ಮತ್ತು ಚೀನೀ ಕಮ್ಯುನಿಸ್ಟ್ ಪಕ್ಷ, ಚೀನೀ ಜನತಾ ಪ್ರಜಾಪ್ರಭುತ್ವ ಇವೆರಡರ ಜೊತೆಗೂ ಸೌಹಾರ್ದ ಸಂಬಂಧ ಹೊಂದಿರುವ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಜಗತ್ತಿನ ಅನೇಕ ರಾಷ್ಟ್ರಗಳಲ್ಲಿವೆ. ಇವುಗಳಲ್ಲಿ ಆಳುವ ಕಮ್ಯುನಿಸ್ಟ್ ಪಕ್ಷಗಳಿರಬಹುದು ಅಥವಾ ಆಡಳಿತದಲ್ಲಿರುವ ಪಕ್ಷಗಳೂ ಇರಬಹುದು. ಸಿ ಪಿ ಐ ನ ಮುಂದಾಳುಗಳಿಗೆ ಈ ಮಾತು ಗೊತ್ತಿಲ್ಲವೇ? ಇತ್ತೀಚೆಗೆ ವಿಯೆತ್ನಾಂ-ಚೀನಾ ಸಮರ ನಡೆದು ಅವುಗಳ ಸಂಬಂಧ ಕೆಡುವವರೆಗೆ ವಿಯೆತ್ನಾಂ ಹಲವಾರು ವರ್ಷಗಳ ಕಾಲ ಇದೇ ರೀತಿಯ ಸಂಬಂಧ ಹೊಂದಿತ್ತು. ಉತ್ತರ ಕೊರಿಯಾ,

ಹ ಪಕ್ಷ ಚೀನೀ ವಿರೋಧಿಯೆಂದೂ ಹಣೆಪಟ್ಟಿ ಹಚ್ಚಿಬಿಡುವ ಪ್ರವೃತ್ತಿ ನಿಷ್ಪ್ರಯೋಜಕವೆನ್ನುವುದನ್ನು ಸಿ ಪಿ.ಐ. ನ ಗಮನಕ್ಕೆ ತರಲು ಬಯಸುತ್ತೇವೆ. ಇಂತಹ ನಿಲುಮೆ ಕಮ್ಯುನಿಸ್ಟ್ ಮತ್ತು ಶ್ರಮಿಕರ ಪಕ್ಷಗಳ ಸಮಾನತೆ ಮತ್ತು ಸ್ವಾತಂತ್ರ್ಯಕ್ಕೆ ಹೊಂದಿಕೆಯಾಗುವುದಿಲ್ಲ; ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಐಕ್ಯಕ್ಕಾಗಿ ನಡೆಯುವ ಹೋರಾಟಕ್ಕೆ ಅದು ಸಹಕಾರಿಯಾಗುವುದೂ ಇಲ್ಲ

ಅತಿದೊಡ್ಡ ವಾಸ್ತವಿಕತೆ

ಸಿ. ಪಿ. ಐ. (ಎಂ.) ತನಗೆ ಸರಿಕಾಣದ ಯಾವುದೇ ವಿಷಯಕ್ಕೆ ಸಂಬಂಧಿಸಿ ಚೀನೀ ಕಮ್ಯುನಿಸ್ಟ್ ಪಕ್ಷವನ್ನಾಗಲೀ ಸೋವಿಯತ್ ಕಮ್ಯುನಿಸ್ಟ್ ಪಕ್ಷವನ್ನಾಗಲೀ ಟೀಕಿಸುವಾಗ ಒಂದು ದೊಡ್ಡ ವಾಸ್ತವಿಕತೆಯನ್ನು ಅದು ಖಂಡಿತವಾಗಿ ಗಮನದಲ್ಲಿರಿಸಿಕೊಳ್ಳುತ್ತದೆ. ಅದೆಂದರೆ ಇವೆರಡೂ ಪಕ್ಷಗಳೂ ಅತಿದೊಡ್ಡ ಸಮಾಜವಾದಿ ರಾಷ್ಟ್ರಗಳೆರಡರ ನೇತೃತ್ವ ವಹಿಸಿರುವ ಬೃಹತ್ ಕಮ್ಯುನಿಸ್ಟ್ ಪಕ್ಷಗಳು. ನಾವು ಚೀನೀ ಕಮ್ಯುನಿಸ್ಟ್ ಪಕ್ಷದ ಟೀಕೆ ಮಾಡುವಾಗ ಅದು ಸುಮಾರು ನೂರು ಕೋಟಿ ಜನಸಂಖ್ಯೆಯಿರುವ ರಾಷ್ಟ್ರವೊಂದರ ಕರ್ಣಧಾರತ್ವ ವಹಿಸಿರುವ ಕಮ್ಯುನಿಸ್ಟ್ ಪಕ್ಷವೆಂಬುದನ್ನು ಸದಾ ನೆನಪಿನಲ್ಲಿಟ್ಟಿರುತ್ತೇವೆ. ಚೀನೀ

ಳನ್ನು ಪರಿತ್ಯಜಿಸಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ ಕಮ್ಯುನಿಸ್ಟ್ ಚಳುವಳಿಯ ಒಗ್ಗಟ್ಟು ಕೂಡಲೇ ಸಾಧ್ಯವಾದೀತು." ಸ್ವಾಮೀ ಲೇಖಕ ಮಹಾಶಯರೇ! ನೀವು ತೀರಾ ದೊಡ್ಡ ಅಪ್ಪಣೆ ಕೊಡಿಸಿದ್ದೀರಿ! ಒಂದೆಡೆ ಕ್ರುಶ್ಚೇವ್‌ವಾದದ ತಿರಸ್ಕಾರ ಒಬ್ಬರ ಪೂರ್ವಶರ್ತ ಇನ್ನೊಂದೆಡೆ ಮಾವೋವಾದದ ಪರಿತ್ಯಾಗ ಇನ್ನೊಬ್ಬರು ಒಡ್ಡುವ ಪೂರ್ವಶರ್ತ, ಹೀಗಾದರೆ ಬಹುಶಃ ವಿಶ್ವ ಕಮ್ಯುನಿಸ್ಟ್ ಚಳುವಳಿಯ ಒಗ್ಗಟ್ಟಿನ ಮಾತೆಲ್ಲಾ ಬರೀ ಗಾಳಿಗೋಪುರವಾಗಿಯೇ ಉಳಿಯುತ್ತದೆ. ಬೇರೆ ಕಮ್ಯುನಿಸ್ಟ್ ಪಕ್ಷಗಳಿಗೆ ಅದರಲ್ಲೂ ಚೀನೀ ಕಮ್ಯುನಿಸ್ಟ್ ಪಕ್ಷ ಮತ್ತು ಸೋವಿಯತ್ ಕಮ್ಯುನಿಸ್ಟ್ ಪಕ್ಷಗಳಿಗೆ ಉಪದೇಶ ನೀಡುವ ಉದ್ಧಟತನ ನಮ್ಮ ಸಿ. ಪಿ ಐ. ಮಿತ್ರರಿಗೆ ಯಾಕಪ್ಪಾ? ಇನ್ನಾದರೂ ಅವರು ಸ್ವಲ್ಪ ವಿನೀತ ಭಾವನೆಯನ್ನು ಹೊಂದಿರಲು ಕಲಿಯಬಾರದೆ? ಯಾವುದೇ ಸಿದ್ಧಾಂತವನ್ನಾದರೂ 'ತಿರಸ್ಕರಿಸುವ' 'ತ್ಯಜಿಸುವ' ಮಾತುಗಳನ್ನೆಲ್ಲಾ ಸಿ ಪಿ ಸಿ. ಮತ್ತು ಸಿ.ಪಿ.ಎಸ್. ಯು. ಗಳ ಸ್ವಂತ ಇಚ್ಛೆಗೇ ಬಿಟ್ಟು ಅವರಿಬ್ಬರ ನಡುವೆ ಒಗ್ಗಟ್ಟು ಉಂಟಾಗುವಂತೆ ಅಥವಾ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಐಕ್ಯಕ್ಕೆ ನೆರವಾಗುವಂತೆ ನಮ್ಮಿಂದಾಗುವ ಕಿಂಚಿತ್ ಸಹಾಯ ಮಾಡುವ ಬಗ್ಗೆ ಯೋಚಿಸಬಾರದೆ?

ಸಿ. ಪಿ. ಐ. ನ ಅಪಾಲಾಪ

—ಎಂ. ಬಸವಪುನ್ನಯ್ಯ

ಕಮ್ಯುನಿಸ್ಟ್ ಪಕ್ಷ ಎಂದಾದರೂ ಹೇಳಿದೆಯೆ? ಸರ್ವಥಾ ಇಲ್ಲ ಆದರೆ ನ್ಯೂಏಜ್‌ನ ಲೇಖಕರು ತಿಳಿದೂ ತಿಳಿದೂ ದುರುದ್ದೇಶಪೂರ್ವಕವಾಗಿ ಈ ಮಾತನ್ನು ಸಿ.ಪಿ ಐ (ಎಂ)ಗೆ ಆರೋಪಿಸಿದ್ದಾರೆ. ಚೀನಾಕ್ಕೆ ಕಳುಹಿಸಿದ್ದ ನಮ್ಮ ಸಂದೇಶದಲ್ಲಿ ಹೇಳಿದ್ದಾದರೂ ಏನು? "ಸೋವಿಯತ್ ಒಕ್ಕೂಟ ಮತ್ತು ಚೀನಾದ ನಡುವಿನ ವಿರಸವು ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ಈ ಭಿನ್ನಾಭಿಪ್ರಾಯದ ಜೊತೆಗೆ ಆಟವಾಡಲು ಮುಕ್ತ ಅವಕಾಶವೊದಗಿಸಿದೆ, ಮತ್ತು ಸಾಮ್ರಾಜ್ಯಶಾಹಿಗಳು ಈ ವಿರಸದ ಪ್ರಯೋಜನ ಪಡೆಯುತ್ತಿದ್ದಾರೆ" ಎಂಬಷ್ಟೇ ನಾವು ಹೇಳಿದ್ದೆವು.

"ಇತ್ತೀಚೆಗೆ ಈ ದೇಶಗಳ ಆಂತರಿಕ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಾಡಲಾಗುತ್ತಿರುವ ದೂರಗಾಮಿ ಪರಿಣಾಮ ಬೀರಬಲ್ಲ ತಿದ್ದುಪಡಿಗಳು ಅವುಗಳ ವಿದೇಶಿ ನೀತಿಯ ಪ್ರಶ್ನೆಯ ಮೇಲೂ ಪ್ರತಿಫಲಿಸುವುವೆಂದೂ ಚೀನೀ-ಸೋವಿಯೆತ್ ಮೈತ್ರಿಯ ಮಾರ್ಗವನ್ನು ಅವು ಸುಗಮಗೊಳಿಸುವುವೆಂದೂ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಐಕ್ಯವನ್ನು ಮರಳಿ ಸ್ಥಾಪಿಸಲು ಅದು ಸಹಕಾರಿಯಾಗುವುದೆಂದೂ ಪ್ರಾಮಾಣಿಕವಾಗಿ ಹಾರೈಸುತ್ತೇವೆ" ಎಂದೂ ನಾವು ಹೇಳಿದ್ದೆವು.

'ಸಮಾಜವಾದಿ ಸಾಮ್ರಾಜ್ಯಶಾಹಿ' ರಾಷ್ಟ್ರವೆಂದು ಚೀನೀ ಕಮ್ಯುನಿಸ್ಟ್ ಪಕ್ಷದ ಮುಂದಾಳುಗಳು ದೂರುವುದರಿಂದ ಮತ್ತು ಚೀನಾವನ್ನು 'ಅಧಿಕಾರಶಾಹಿ', 'ಸೈನಿಕಶಾಹಿ' 'ಫ್ಯಾಸಿಸ್ಟ್ ಸರ್ವಾಧಿಕಾರಿ'ಯೆಂದು ರಷ್ಯನ್ ಕಮ್ಯುನಿಸ್ಟ್ ಪಕ್ಷ ಬಯ್ಯುವುದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಇದನ್ನು ಕಳೆದ 15-20 ವರ್ಷಗಳ ಚೀನಾ-ರಷ್ಯಾ ಸಂಘರ್ಷ ಮತ್ತು ಜಾಗತಿಕ ವಿದ್ಯಮಾನಗಳನ್ನು ಅಭ್ಯಸಿಸಿದ ಯಾರೂ ಅಲ್ಲಗಳೆಯಲಾರರು. ಇವು ಎರಡೂ ರಾಷ್ಟ್ರಗಳ ನಡುವಣ ಬಿರುಕನ್ನು ಇನ್ನಷ್ಟು ವಿಸ್ತಾರಗೊಳಿಸಿವೆ; ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಅನೈಕ್ಯವನ್ನು ತೀವ್ರಗೊಳಿಸಿವೆ. ಇಂತಹ ಆರೋಪ ಪ್ರತ್ಯಾರೋಪಗಳಿಂದ ಯಾರಿಗೆಷ್ಟೇ ನೋವಾದರೂ ಈ ಎರಡು ಬೃಹತ್ ಸಮಾಜವಾದಿ ರಾಷ್ಟ್ರಗಳ ನಡುವಿನ ಪರಸ್ಪರ ಬೈಗುಳ ಸುರಿಮಳೆಯನ್ನು ತಡೆಯುವುದಂತೂ ನಮ್ಮಿಂದ ಅಸಾಧ್ಯ.

ಆದರೆ ಈ ಆರೋಪಪ್ರತ್ಯಾರೋಪಗಳಲ್ಲಿ ನಾವು ಯಾರ ಪಕ್ಷವನ್ನು ವಹಿಸದಿರುವುದು ಅಸಾಧ್ಯವೇನಲ್ಲ: ಮತ್ತು ಆ ರೀತಿ ಪಕ್ಷವಹಿಸದಿರಲು ನಾವು ಸಂಪೂರ್ಣ ಸ್ವತಂತ್ರರು. ಈ ವಿಚಾರದಲ್ಲಿ ಸಿ. ಪಿ ಐ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿರುದ್ಧ ಕೊಳಕು ಅಪಪ್ರಚಾರ ಮಾಡುತ್ತಿರು

ರುಮಾನಿಯಾ, ಯುಗೊಸ್ಲಾವಿಯಾ ಮತ್ತಿತರ ರಾಷ್ಟ್ರಗಳು ಮತ್ತು ಅವುಗಳ ಕಮ್ಯುನಿಸ್ಟ್ ಪಕ್ಷಗಳು ಚೀನಾ ಮತ್ತು ರಷ್ಯಾ ಇವೆರಡರ ಜೊತೆಗೂ ಸರಕಾರ ಮಟ್ಟದಲ್ಲೂ ಮತ್ತು ಪಕ್ಷದ ಮಟ್ಟದಲ್ಲಿ ಸಂಬಂಧ ಇಟ್ಟುಕೊಂಡಿವೆ ಈ ಎಲ್ಲಾ ಪಕ್ಷಗಳೂ ತೋರಿಕೆಯ ನಿಷ್ಪಕ್ಷಪಾತ ನಿಲುಮೆಯನ್ನು ಸಮಾನ ಅಂತರವಿರಿಸಿಕೊಳ್ಳುವ ನೀತಿಯನ್ನೂ ತಳೆದಿವೆಯೆಂದೂ ಸಿ ಪಿ.ಐ. ಭಾವಿಸಿದೆಯೇ? ಪ್ರಪಂಚದಲ್ಲೆಲ್ಲಾ ಸಿ ಪಿ.ಐ. ಒಂದೇ ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಪಂಡಿತನೇ?

ಬೂರ್ಶ್ವಾ ಬರಹಗಾರರೂ ಕಮ್ಯುನಿಸ್ಟ್ ವಿರೋಧಿಗಳೂ ಈ ತನಕ ಸಿ. ಪಿ ಐ. (ಎಂ) ತೋರಿಕೆಯ ನಿಷ್ಪಕ್ಷಪಾತತನ ಮತ್ತು ಸಮಾನ ಅಂತರದ ನಿಲುಮೆ ತಳೆದಿದೆಯೆಂದು ಅಪಪ್ರಚಾರ ಮಾಡುತ್ತಿದ್ದರು. ಇದೀಗ ಸಿ. ಪಿ. ಐ. ನ ಮುಂದಾಳುಗಳೂ ಇದೇ ಸಮಕಲು ವಾದಸರಣಿಯನ್ನು ಎತ್ತಿಕೊಂಡಿರುವುದು ವಿಷಾದಕರ, ಸೋವಿಯತ್ ಪಕ್ಷ ಚೀನೀ ಪಕ್ಷದ ವಿರುದ್ಧ ಹೇಳುತ್ತಿರುವುದನ್ನು ಪುನರುಚ್ಚರಿಸದಿದ್ದಲ್ಲಿ ಅಂತಹ ಪಕ್ಷ ಸೋವಿಯತ್ ವಿರೋಧಿಯೆಂದೂ ಚೀನೀ ಪಕ್ಷ ಸೋವಿಯತ್ ಪಕ್ಷದ ವಿರುದ್ಧ ಹೇಳುವುದನ್ನು ಒಪ್ಪಿಕೊಳ್ಳದ ಮಾತ್ರಕ್ಕೆ ಅಂತ

ಕಮ್ಯುನಿಸ್ಟ್ ಪಕ್ಷವನ್ನಾಗಲೀ ಚೀನೀ ಗಣರಾಜ್ಯವನ್ನಾಗಲೀ ಜಾಗತಿಕ ಕಮ್ಯುನಿಸ್ಟ್ ಚಳುವಳಿಗೆ ಹೊರತಾದವುಗಳೆಂದು ಭಾವಿಸುವುದು ಅಥವಾ ಚೀನೀ ಅಮೇರಿಕನ್ ಸಾಮ್ರಾಜ್ಯಶಾಹಿಯ ಹಸ್ತಕನೆಂದಾಗಲೀ ಜಾಗತಿಕ ಸಾಮ್ರಾಜ್ಯಶಾಹಿಯ ಬಂಟ ಎಂಬಿತ್ಯಾದಿ ಅಪಪ್ರಚಾರ ಮಾಡುವುದಾಗಲೀ ಸಂಪೂರ್ಣ ತಪ್ಪು ಎಂದು ನಾವು ಭಾವಿಸುತ್ತೇವೆ. ಸಮಾಜವಾದಿ ಚೀನಾ ಸಮಾಜವಾದಿ ರಾಷ್ಟ್ರವೇ ಅಲ್ಲವೆಂದು ಸಿ ಪಿ ಐ. ಪರಿಗಣಿಸುವುದಾದರೆ ಹಾಗೆ ಮಾಡಲು ಮತ್ತು ಇಂತಹ ಹಾಸ್ಯಾಸ್ಪದ ವಿಶ್ಲೇಷಣೆಯ ರಾಜಕೀಯ, ಸೈದ್ಧಾಂತಿಕ ಪರಿಣಾಮಗಳನ್ನು ಎದುರಿಸಲೂ ಸಿ.ಪಿ.ಐ.ಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ಈ ದಿವಾಳಿಕೋರ ಸಿದ್ಧಾಂತವನ್ನು ಸಿ. ಪಿ. ಐ. (ಎಂ.) ಅಂಗೀಕರಿಸಬೇಕೆಂದು ಶಿಫಾರಸು ಮಾಡುವುದು ಯಾವ ನ್ಯಾಯ? 1963-64ರ ನಂತರದ ಸುಮಾರು 16 ವರ್ಷಗಳ ಕಾಲ ಶಿಫಾರಸು ಮಾಡಲಾದ ಇಂತಹ ಅನೇಕ ಬಲಪರಿಷ್ಕರಣವಾದಿ ಸಿದ್ಧಾಂತಗಳು ಸಂಪೂರ್ಣ ತಪ್ಪೆಂದು ಸಿದ್ಧವಾದದ್ದು ಸಾಲದೆ?

ನ್ಯೂಏಜ್‌ನ ಲೇಖಕರ ಇನ್ನೊಂದು ಉದ್ಧಟತನದ ಉಪದೇಶ ಹೀಗಿದೆ- "ಚೀನೀ ಮುಂದಾಳುಗಳು ತಮ್ಮ ಮಾವೋವಾದಿ ಧೋರಣೆಗ

ಸಿ.ಪಿ.ಐ.(ಎಂ)ನ ನಿಲುಮೆ

ಯಾವುದೇ ಪ್ರಶ್ನೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವ ಹಕ್ಕು ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷಕ್ಕೂ ಇದೆ. ಹಲವಾರು ಸಂದರ್ಭಗಳಲ್ಲಿ ಸಿ ಪಿ ಐ. (ಎಂ) ಕೂಡಾ ಸಿ. ಪಿ ಎಸ್. ಯು. ಅಥವಾ ಸಿ. ಪಿ ಸಿ ಯ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿದೆ. ಆದರೆ ಯಾವತ್ತೂ ಅದು ಸೋವಿಯೆತ್ ಒಕ್ಕೂಟವನ್ನು ಸಮಾಜವಾದಿ ಸಾಮ್ರಾಜ್ಯಶಾಹಿಯೆಂದಾಗಲೀ ಚೀನಾವನ್ನು ಅಧಿಕಾರಶಾಹಿ ಸೈನಿಕ ಫ್ಯಾಸಿಸ್ಟ್ ಸರ್ವಾಧಿಕಾರಿಯೆಂದಾಗಲೀ ಹೇಳುವ ತಪ್ಪು ಮಾಡಿಲ್ಲ. ಸಿ ಪಿ ಐ. ತನ್ನ ರಾಜಕೀಯ ಸೈದ್ಧಾಂತಿಕ ಮತ್ತು ಸಾಂಸ್ಥಿಕ ಧೋರಣೆಯೇ ಸರಿಯೆಂದೂ ಅದು ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಐಕ್ಯಕ್ಕೆ ಸಹಕಾರಿಯೆಂದೂ ಭಾವಿಸುವುದಾದರೆ ಅಂತಹ ನೀತಿಯನ್ನು ಅದು ಧಾರಾಳವಾಗಿ ಮುಂದುವರಿಸಿಕೊಂಡು ಹೋಗಲಿ. ಆದರೆ ಈ ವಿಷಯದಲ್ಲಿ ಸಿ ಪಿ ಐ (ಎಂ)ನ ಮೇಲೆ ಸುಳ್ಳುಸುಳ್ಳೇ ಆರೋಪ ಹೊರಿಸುವುದಾಗಲೀ ಅನಗತ್ಯ ಉಪದೇಶ ನೀಡುವುದಾಗಲೀ ಬೇಡ.

ಚೀನಾ ಮತ್ತು ಭಾರತದ ಸಂಬಂಧ ಸುಧಾರಣೆಯ ಮಹತ್ವದ ಮಾತ್ರಕ್ಕೆ

(6ನೇ ಪುಟ ನೋಡಿ)

ಪಶ್ಚಿಮ ಯುರೋಪಿನಾದ್ಯಂತ ನವ - ನಾಝೀ ಹಿಂಸೆಯ ಗಾಳಿ

ಎರಡನೇ ಜಾಗತಿಕ ಯುದ್ಧದ ನಂತರ ಇದುವರೆಗೆ ಕಂಡುಬರದ ಅತೀ ಕ್ರೂರ ಹಿಂಸಾಚಾರಗಳು ಪಶ್ಚಿಮ ಯುರೋಪಿನಾದ್ಯಂತ ಈಗ ತೀವ್ರವಾಗಿ ವ್ಯಾಪಿಸುತ್ತಿವೆ. ಕಳೆದ ಕೆಲವು ತಿಂಗಳಲ್ಲಿ ಸುಮಾರು ನೂರಕ್ಕೂ ಹೆಚ್ಚು ಜನ ಇದರಲ್ಲಿ ಕೊಲೆಯಾಗಿದ್ದಾರೆ. ಈ ದೇಶಗಳಲ್ಲಿ ಬಲಪಂಥೀಯ ಪ್ರತಿಗಾಮಿ ಶಕ್ತಿಗಳು ಪರಂಪರಾಗತ ಅಲ್ಪಸಂಖ್ಯಾತ ಯಹೂದಿ ಕೋಮಿನವರ ಮೇಲೆ ಮಾತ್ರವಲ್ಲ ಕರಿಯರು ಹಾಗೂ ಇತರ ವರ್ಣೀಯ ವಲಸೆಗಾರರು, ಪ್ರಗತಿಶೀಲರು ಹಾಗೂ ಪ್ರಜಾಪ್ರಭುತ್ವವಾದಿ ವಿಭಾಗಗಳು, ಎಡಪಂಥೀಯ ಚಳುವಳಿ ಹಾಗೂ ಕಮ್ಯುನಿಸ್ಟ್ ಪಕ್ಷಗಳ ಮೇಲೂ ಹಲ್ಲೆ ನಡೆಸುತ್ತಿವೆ.

ಹಿಂಸಾಕೃತ್ಯಗಳು

ಕಳೆದ ಕೆಲವು ತಿಂಗಳಲ್ಲಿ ಬಲಪಂಥೀಯ ಭಯೋತ್ಪಾದಕರು ಎಸಗಿದ ಹಿಂಸಾಕೃತ್ಯಗಳಲ್ಲಿ ಅತೀ ಭಯಾನಕವಾದವು ಪಶ್ಚಿಮ ಜರ್ಮನಿಯ ಮ್ಯೂನಿಕ್, ಇಟಲಿಯ ಬೊಲೋಗ್ನ ಹಾಗೂ ಪ್ಯಾರಿಸ್‌ನಲ್ಲಿ ನಡೆದವು. ಮ್ಯೂನಿಕ್ ಬೀರ್ ಹಾಲ್‌ನ ಬಾಂಬ್ ಎಸೆತದಲ್ಲಿ 12 ಜನ ಕೊಲ್ಲಲ್ಪಟ್ಟರು. ಆಗಸ್ಟ್ 2 ರಂದು ನಡೆದ ಬೊಲೋಗ್ನಾ ರೈಲು ನಿಲ್ದಾಣದ ಬಾಂಬ್ ಸ್ಫೋಟದಲ್ಲಿ 30 ಮಕ್ಕಳೂ ಸೇರಿದಂತೆ 80 ಜನ ಕೊಲೆಯಾದರು ಹಾಗೂ 200 ಜನ ಗಾಯಗೊಂಡರು. ಪ್ಯಾರಿಸ್‌ನಲ್ಲಿ ಅಕ್ಟೋಬರ್ 3 ರಂದು ಯಹೂದಿ ಜನರ ಪ್ರಾರ್ಥನಾ ಮಂದಿರದ ಹೊರಗಡೆ ನಡೆದ ಬಾಂಬ್ ಸಿಡಿತದಲ್ಲಿ ನಾಲ್ಕು ಜನ ದಾರಿಹೋಕರು ಕೊಲ್ಲಲ್ಪಟ್ಟು ಒಂಬತ್ತು ಜನ ಗಾಯಗೊಂಡರು.

ಇವುಗಳಲ್ಲಿ ಕೊನೆಯ ಎರಡು ದುರಂತಗಳಿಗೆ ತಾವು ಹೊಣೆಯೆಂದು ಫ್ಯಾಸಿಸ್ಟ್ ಗುಂಪುಗಳು ಹೇಳಿಕೊಂಡಿವೆ. ಮ್ಯೂನಿಕ್ ಬೀರ್‌ಹಾಲ್ ಘಟನೆ ಒಬ್ಬ ವಿದ್ಯಾರ್ಥಿಯ ಕೈಯಲ್ಲಿದ್ದ ಬಾಂಬ್ ಸಿಡಿದದ್ದರಿಂದ ಆಯಿತೆಂಬುದೂ ಆ ವಿದ್ಯಾರ್ಥಿ ಮಿಲಿಟರಿ ಸ್ಪೋರ್ಟ್ಸ್ ಗ್ರೂಪ್ ಹಾಫ್‌ಮನ್ ಎಂಬ ಸಂಘಟನೆಯ ಸದಸ್ಯನೆಂಬುದೂ ಈಗ ಸುಮಾರಾಗಿ ಸ್ಪಷ್ಟವಾಗಿದೆ. ಈ ಸಂಘಟನೆಗೆ ಪಶ್ಚಿಮ ಜರ್ಮನಿಯ ಬಲಪಂಥೀಯ ಪ್ರತಿಕ್ರಿಯಾವಾದಿ ಸಂಘಟನೆಗಳಲ್ಲೇ ಅತ್ಯಂತ ಹೆಚ್ಚಿನ ಹಿಟ್ಲರ್‌ತನ ಹೊಂದಿದ ಸಂಘಟನೆ ಹಾಗೂ ಇದು ನಾಝೀ ವ್ಯವಸ್ಥೆಯನ್ನು ಮತ್ತೊಮ್ಮೆ ಸ್ಥಾಪಿಸಬೇಕೆಂಬ ತನ್ನ ಆಕಾಂಕ್ಷೆಯನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದೆ. ಈ ಹೊಸ ನಾಝೀ ವ್ಯವಸ್ಥೆಯ ಫ್ಯೂರರ್ ಅಥವಾ ನಾಯಕನೆಂದರೆ ಹಿಂದೆ ಸೈನ್ ಪೈಂಟರ್ ಹಾಗೂ ಕೂಲಿಭಟನಾಗಿದ್ದ ಹಾಫ್‌ಮನ್.

ಪ್ಯಾರಿಸ್‌ನ ಯಹೂದಿ ಪ್ರಾರ್ಥನಾ ಮಂದಿರದಲ್ಲಿ ಸಾಯಂಕಾಲದ ಪ್ರಾರ್ಥನೆ ನಿತ್ಯಕ್ಕಿಂತ ಸ್ವಲ್ಪ ಹೆಚ್ಚು ಸಮಯ ನಡೆಯದಿರುತ್ತಿದ್ದರೆ ಆ ಘಟನೆ ಇನ್ನೂ ದೊಡ್ಡ ದುರಂತವಾಗಿಬಿಡುತ್ತಿತ್ತು. ಪ್ರಾರ್ಥನೆಗೆ ಸೇರಿದ 400 ಜನ ನಿತ್ಯದ ಹೊತ್ತಿಗೆ ಮಂದಿರದಿಂದ ಹೊರಗೆ ಬರುತ್ತಿದ್ದರೆ ಸಮೀಪದಲ್ಲೇ ನಿಲ್ಲಿಸಿದ್ದ ಕಾರಿನಲ್ಲಿ ಪೂರ್ವಯೋಜನೆಯಂತೆ ಸಿಡಿದ 25 ಪೌಂಡ್ ಬಾಂಬಿನಿಂದ 400ರಲ್ಲಿ 200 ಜನರಾದರೂ ಕೊಲೆಯಾಗುತ್ತಿದ್ದರು ಎಂದು ಪೋಲೀಸರು ಅಂದಾಜು ಮಾಡಿದ್ದಾರೆ. ಇತ್ತೀಚೆಗೆ ಬಹಿಷ್ಕರಿಸಲ್ಪಟ್ಟ ಯುರೋಪಿಯನ್ ನ್ಯಾಶನಲ್ ಫ್ಯಾಸಿಸ್ಟ್ (FANE) ಎಂಬ ಸಂಘಟನೆ ತಾನು ಈ ಘಟನೆಗೆ ಹೊಣೆ ಎಂದು ಹೇಳಿಕೊಂಡಿದೆ ಇದು ಪ್ರತಿಗಾಮಿ ಸಂಘಟನೆಗಳಲ್ಲೇ ಅತ್ಯಂತ ಹೆಚ್ಚು ನಾಝೀತನ ಹೊಂದಿರುವ ಸಂಘಟನೆ.

ವಾರ್ಷಿಕ ಸಮಾರಂಭಗಳು, ರ್‍ಯಾಲಿಗಳು

ಈಗ ಯುರೋಪಿನಲ್ಲಿ ಕಂಡು ಬರುತ್ತಿರುವ ಈ ಬಲಪಂಥೀಯ ಭಯೋತ್ಪಾದಕತೆಯ ಅತೀ ಕಳವಳಕಾರೀ ಅಂಶವೆಂದರೆ ಇದು ಒಂದು ಅಂತರರಾಷ್ಟ್ರೀಯ ಚಳುವಳಿಯಾಗಿರುವಂತೆ ಕಾಣುತ್ತಿರುವುದು. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಪಶ್ಚಿಮ ಜರ್ಮನಿ, ಸ್ಪೇನ್, ಬೆಲ್ಜಿಯಮ್ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನವೂ ಸೇರಿದಂತೆ ವಿವಿಧ ದೇಶಗಳ ವಿವಿಧ ಸಂಘಟನೆಗಳು ತಮ್ಮ ಚಟುವಟಿಕೆಗಳನ್ನು ಪರಸ್ಪರ ಹೊಂದಿಸಿಕೊಂಡು, ವಿಚಾರ-ವಿನಿಮಯ ಮಾಡಿಕೊಂಡು, ಶಸ್ತ್ರಾಸ್ತ್ರಗಳು ಸುಲಭವಾಗಿ ಸರಬರಾಜಾಗುವಂತೆ ವ್ಯವಸ್ಥೆ ಮಾಡಿಕೊಂಡು ಜಂಟೀ ರ್‍ಯಾಲಿಗಳನ್ನು, ಸಭೆಗಳನ್ನು ನಡೆಸುತ್ತಿವೆ.

ಬೆಲ್ಜಿಯಮ್‌ನಲ್ಲಿ "ಫ್ಲೆಮಿಷ್ ಮಿಲಿಟೆಂಟ್ ಆರ್ಡರ್" ಎಂಬ ಸಂಘಟನೆ ವಾರ್ಷಿಕವಾಗಿ ನಡೆಸುತ್ತಿರುವ ಒಂದು ಸಭೆಯಲ್ಲಿ ಹಿಟ್ಲರ್ ಹಾಗೂ ಇತರ ನಾಝೀಗಳ ಪುಸ್ತಕಗಳು ಹಾಗೂ ದಾಖಲೆಗಳನ್ನು ಬಹಿರಂಗವಾಗಿಯೇ ಮಾರಲಾಗಿದೆ. ಮಡಿದ ನಾಝೀ ಗುಪ್ತಚರ ಪಡೆಯವರ ಸಮಾಧಿಗಳಿಗೆ ಗೌರವವನ್ನು ಅರ್ಪಿಸುವುದು ಈ ರ್‍ಯಾಲಿಯ ಉದ್ದೇಶವೆಂದು ಹೇಳಲಾಗುತ್ತಿದ್ದರೂ, ಅದರ ಮುಖ್ಯ ಉದ್ದೇಶ ಈ ಸಮಾರಂಭದಲ್ಲಿ ಭಾಗವಹಿಸುವ ವಿವಿಧ ಗುಂಪುಗಳ ನಡುವೆ ತಮ್ಮ ಕಾರ್ಯನೀತಿಗಳ ಹೊಂದಾಣಿಕೆ ಬಗ್ಗೆ ಚರ್ಚೆ ನಡೆಸುವುದು. ಈ ರ್‍ಯಾಲಿಯಲ್ಲಿ ಪಶ್ಚಿಮ ಜರ್ಮನಿಯ ಇನ್ನೂ ಜೀವಂತವಿರುವ ನಾಝೀಗಳು ಹಾಗೂ 20 ದೇಶಗಳ ಬಲಪಂಥೀಯ ತೀವ್ರಗಾಮಿ ಗುಂಪುಗಳ ಪ್ರತಿನಿಧಿಗಳು ಭಾಗವಹಿಸುತ್ತಾರೆ.

ಜುಲೈ ತಿಂಗಳಲ್ಲಿ ನಡೆದ ಈ ವರ್ಷದ ರ್‍ಯಾಲಿಯಲ್ಲಿ ಅಮೇರಿಕದ ನವ-ನಾಝೀಗಳು, ಜನಾಂಗ ಭೇದ ನೀತಿಯ ಕು ಕ್ಲಕ್ಸ್ ಕ್ಲಾನ್ ಯುರೋಪಿನ ಫ್ಯಾಸಿಸ್ಟ್ ಗುಂಪುಗಳಿಗೆ ಶಸ್ತ್ರಾಸ್ತ್ರ ಒದಗಿಸುವುದಾಗಿ ಹೇಳಿದ್ದಾರೆ. ಬ್ರಿಟಿಷ್ ಫ್ಯಾಸಿಸ್ಟ್ ಗುಂಪುಗಳು ಹಾಗೂ ಇಟಾಲಿಯನ್ ಫ್ಯಾಸಿಸ್ಟ್ ಗುಂಪುಗಳ ನಡುವೆ ಸದಸ್ಯರ ವಿನಿಮಯದ ಬಗ್ಗೆ ಒಪ್ಪಂದ ನಡೆದಿದೆ ಎಂದೂ ವರದಿಯಾಗಿದೆ. ಈ ಒಪ್ಪಂದದ ಉದ್ದೇಶ ಒಬ್ಬರು ಇನ್ನೊಬ್ಬರ ದೇಶದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ಎಸಗುವುದೇ ಆಗಿದೆ.

ಬಲಪಂಥೀಯ ಭಯೋತ್ಪಾದಕ ಕೃತ್ಯಗಳು ಹೆಚ್ಚುತ್ತಿರುವುದಕ್ಕೆ ಸರಿಹೊಂದಿಕೊಂಡು ಯಹೂದಿ ಪ್ರಾರ್ಥನಾ ಮಂದಿರದ ಗೋಡೆಗಳಗಳ ಮೇಲೆ ನಾಝೀ ಘೋಷಣೆಗಳನ್ನು ಬರೆಯುವುದು, ಅವರ ಸಮಾಧಿಗಳನ್ನು ಅಪವಿತ್ರಗೊಳಿಸುವುದು ಮತ್ತು ಯಹೂದಿ ಮತ್ತು ವಲಸೆಗಾರರ ಕಟ್ಟಡಗಳು, ಮನೆಗಳ ಮೇಲೆ ದಾಳಿ ನಡೆಸುವುದು ಇತ್ಯಾದಿಗಳೂ ಹೆಚ್ಚುತ್ತಿವೆ. ಫ್ಯಾಸಿಸ್ಟರಿಗೆ ಎಷ್ಟೊಂದು ಧೈರ್ಯ ಬಂದಿದೆಯೆಂದರೆ ಅವರು ನಾಝೀ ಸಮವಸ್ತ್ರ ಧರಿಸಿ ಸಾರ್ವಜನಿಕ ಪರೇಡ್ ನಡೆಸುತ್ತಿದ್ದಾರೆ; ಹಿಟ್ಲರ್‌ನ ಆತ್ಮವೃತ್ತಾಂತವಾದ "ಮೈನ್ ಕೆಂಫ್"ವನ್ನು ಪವಿತ್ರ ಗ್ರಂಥವೆಂದು ಪರಿಗಣಿಸುತ್ತಾರೆ; ನಾಝೀ ಯುದ್ಧ ಗೀತೆಗಳನ್ನು ಹಾಡುತ್ತಾರೆ. ಶಾಲೆ, ಕಾಲೇಜುಗಳಲ್ಲಿ ಯುವಕ ಫ್ಯಾಸಿಸ್ಟರು ಸ್ವಸ್ತಿಕದ ಚಿಹ್ನೆ ಹೊಂದಿರುವ ಚೀಲಗಳನ್ನುಪಯೋಗಿಸುವುದನ್ನೂ ಕಾಣಬಹುದು.

'ಫ್ಲೆಮಿಷ್ ಮಿಲಿಟೆಂಟ್ಸ್' ಗುಂಪಿನ ನಾಯಕ ಬರ್ಟ್ ಎರಿಕ್ಸನ್ ನಾಝೀ ಸಿದ್ಧಾಂತದ ಸ್ಪಷ್ಟ ಸಾರಾಂಶವನ್ನು ಈ ರೀತಿ ಹೇಳುತ್ತಾನೆ— "ಅಗತ್ಯ ಬಿದ್ದರೆ ರಕ್ತವೂ ಹರಿಯಲಿದೆ." ತನ್ನ ಮನೆಯಲ್ಲಿ ಸ್ವಸ್ತಿಕಗಳನ್ನು ಹಾಗೂ ಇತರ ನಾಝೀ ಸಾಮಾನು-ಸರಂಜಾಮುಗಳನ್ನು ಇಟ್ಟುಕೊಂಡಿರುವ ಈತ ಒಬ್ಬ ಸಂದರ್ಶಕನಿಗೆ ಮೇಲಿನಂತೆ ಹೇಳಿದ್ದಾನೆ. ಆ್ಯಂಟ್‌ವರ್ಪ್‌ನಲ್ಲಿ ಕಳೆದ ಬೇಸಗೆಯಲ್ಲಿ ಪ್ರವಾಸದಲ್ಲಿದ್ದ ಹಲವು ಫ್ರೆಂಚ್ ಯಹೂದಿ ಮಕ್ಕಳನ್ನು ಬಾಂಬೆಸೆದು ಕೊಂದ ಘಟನೆಯನ್ನು ಎರಿಕ್ಸನ್‌ನ ಈ ಹೇಳಿಕೆಯೊಂದಿಗೆ ನೆನಸಿಕೊಂಡರೆ ರಕ್ತ ಹೆಪ್ಪುಗಟ್ಟುವಂತಾಗುತ್ತದೆ. ಆ್ಯಂಟ್‌ವರ್ಪ್‌ನ ಆ ಘಟನೆ ನಡೆದ ಸಮಯದಲ್ಲಿ 'ಫ್ಲೆಮಿಷ್ ಮಿಲಿಟೆಂಟ್ಸ್' ಗುಂಪು ವಲಸೆಗಾರರ ವಿರುದ್ಧವೂ ಮತಪ್ರದರ್ಶನ ನಡೆಸುತ್ತಿತ್ತು.

ಬ್ರಿಟನ್ನಿನಲ್ಲಿ ಚಟುವಟಿಕೆಗಳು

ಈ ವರ್ಷ ಬ್ರಿಟನ್ನಿನಲ್ಲೂ ಯಹೂದಿ ಪ್ರಾರ್ಥನಾ ಮಂದಿರಗಳ ಮೇಲೆ ನಾಝೀ ಘೋಷಣೆಗಳನ್ನು ಬರೆಯುವುದು, ಅವರ ಸಮಾಧಿ ಸ್ಥಳವನ್ನು ಅಪವಿತ್ರಗೊಳಿಸುವುದು ಬಹಳ ಹೆಚ್ಚಾಗಿದೆ ಆದರೂ ಬಲಪಂಥೀಯ ಉಗ್ರಗಾಮಿಗಳ ಹಲ್ಲೆಗಳಿಗೆ ಇದಕ್ಕಿಂತಲೂ ಹೆಚ್ಚಾಗಿ ಒಳಗಾದವರು ಭಾರತೀಯ, ಪಾಕಿಸ್ತಾನಿ ಹಾಗೂ ವೆಸ್ಟ್‌ಇಂಡೀಸ್ ವಲಸೆಗಾರರು ಎಂಬುದನ್ನು ಯಹೂದಿ ನಾಯಕರೂ ಒಪ್ಪಿಕೊಳ್ಳುತ್ತಾರೆ.

ನಾಝೀ ಗುಂಪುಗಳು ಶಸ್ತ್ರಾಸ್ತ್ರಗಳು, ಸ್ಫೋಟಕಗಳು ಹಾಗೂ ಭಯೋತ್ಪಾದಕ ಕಾರ್ಯ ನಡೆಸುವ ಸಾಮರ್ಥ್ಯ ಹೊಂದಿವೆಯೆಂಬುದು ನ್ಯಾಯಾಲಯಗಳಲ್ಲಿನ ಇತ್ತೀಚಿನ ಮೊಕದ್ದಮೆಗಳಿಂದ ತಿಳಿದುಬರುತ್ತದೆ. ನಾಝೀಗಳ ಪರವಾದ ಸಭೆಗಳಲ್ಲಿ ಸ್ಫೋಟಕಗಳನ್ನು ತಯಾರಿಸುವ ವಿವರಗಳನ್ನು ತಿಳಿಸಲಾಗುತ್ತದೆ. ಇಂಗ್ಲೆಂಡ್ ಮತ್ತು ಸ್ಪೇನಿನಲ್ಲಿ ತರಬೇತಿ ಶಿಬಿರಗಳೂ ನಡೆದಿವೆ.

ಫ್ಯಾಸಿಸ್ಟ್ ಗುಂಪುಗಳಲ್ಲಿ ಅತೀ ಭಯಾನಕವಾಗಿರುವುದು ಅರೆಸೈನಿಕ ಗುಂಪಾದ "ಕಾಲಂ 88" ಎಂಬುದು. ಸುಮಾರು 300 ಇರಬಹುದಾದ ಈ ಗುಂಪಿನ ಸದಸ್ಯರನ್ನು ಇತರ ಫ್ಯಾಸಿಸ್ಟ್ ಗುಂಪುಗಳಿಂದ ಕೇವಲ ಆಹ್ವಾನದ ಮೇರೆಗೆ ಸೇರಿಸಿಕೊಳ್ಳಲಾಗುವುದು. ತನ್ನ ಜನಾಂಗ ಭೇದ ನೀತಿಯಿಂದಾಗಿ ಬ್ರಿಟನ್ನಿನಲ್ಲಿ ಸುದ್ದಿಯಲ್ಲಿದ್ದ 'ರಾಷ್ಟ್ರೀಯ ರಂಗ' (National Front) ಈಗ ಛಿದ್ರವಾಗಿದ್ದು, 'ಸೈಂಟ್ ಜಾರ್ಜ್‌ನ ಲೀಗ್' ಎಂಬ ಫ್ಯಾಸಿಸ್ಟ್ ಗುಂಪು ಅದನ್ನು ಮತ್ತೆ ಒಂದುಗೂಡಿಸಲು ಪ್ರಯತ್ನಿಸುತ್ತಿದೆ. ಈ "ರಾಷ್ಟ್ರೀಯ ರಂಗ"ದಿಂದ ಸಿಡಿದು ಹೋದ "ಬ್ರಿಟಿಷ್ ಆಂದೋಲನ" ಎಂಬ ಗುಂಪು ಬಹಿರಂಗ ಹಿಂಸಾಚಾರ, ನೇರ ಜನಾಂಗ ಭೇದ ನೀತಿ ಹಾಗೂ ಯಹೂದಿ ವಿರೋಧೀವಾದದಲ್ಲಿ ನಂಬಿಕೆಯಿಟ್ಟಿದೆ. ಈ ಗುಂಪು ಹಿಟ್ಲರ್‌ನ ಜನ್ಮದಿನಾಚರಣೆ ನಡೆಸುತ್ತದೆ ಆ ಸಮಾರಂಭದ ಮುಖ್ಯ ಕಾರ್ಯಕ್ರಮವೆಂದರೆ ನಾಝೀ ಸಮವಸ್ತ್ರ ಧರಿಸುವುದು, ಹಿಟ್ಲರ್‌ನ ಪುಸ್ತಕ "ಮೈನ್ ಕೆಂಫ್"ನ ಆಯ್ದ ಭಾಗಗಳನ್ನು ಓದುವುದು ಹಾಗೂ ನಾಝೀ ಯುದ್ಧ ಗೀತೆಗಳನ್ನು ಹಾಡುವುದು.

ಪಶ್ಚಿಮ ಜರ್ಮನಿಯಲ್ಲಿ

ಪಶ್ಚಿಮ ಜರ್ಮನಿಯಲ್ಲಿ ಸುಮಾರು 70 ಬಲಪಂಥೀಯ ಸಂಘಟನೆಗಳಿವೆ. ಇವುಗಳ ಒಟ್ಟು ಸದಸ್ಯ ಸಂಖ್ಯೆ 17,000ಕ್ಕೂ ಮಿಕ್ಕಿದೆ. ಇವುಗಳಲ್ಲಿನ ನವನಾಝೀ ಗುಂಪುಗಳು ಒಂದು ವರ್ಷದ ಹಿಂದೆ ಭಯೋತ್ಪಾದಕ ಚಟುವಟಿಕೆ ಆರಂಭಿಸಿದವು. ಔಸ್‌ವಿಟ್ಸ್ (ನಾಝೀಗಳ ಕುಖ್ಯಾತ ಶ್ರಮಶಿಬಿರ)ನ ವಿನಾಶ ಶಿಬಿರಗಳ ಬಗೆಗಿನ ಒಂದು ಪ್ರದರ್ಶನದ ಮೇಲೆ ಎರಡು ಬಾರಿ ಹಾಗೂ ಆಶ್ರಯ ಅಥವ ಕೆಲಸ ಕೇಳಿಕೊಂಡು ಬಂದ ವಿದೇಶೀಯರಿಗಾಗಿ ಇರುವ ಕಟ್ಟಡಗಳ ಮೇಲೆ ಮೂರು ಬಾರಿ ದಾಳಿ ಮಾಡಲಾಯಿತು.

ಈ ಗುಂಪಿನ ನಾಯಕನಾದ ಕಾರ್ಲ್ ಹೈಂಜ್‌ಮನ್ 17 ವರ್ಷಗಳ ಹಿಂದೆ ತುರ್ಕಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕದ್ದೊಯ್ಯುವಾಗ ಸಿಕ್ಕಿಬಿದ್ದಿದ್ದ. ಐದು ವರ್ಷಗಳ ನಂತರ ತನ್ನ ಗೆಳೆಯರೊಂದಿಗೆ ಬಹಿಷ್ಕೃತವಾದ ನಾಝೀ ಚಿಹ್ನೆ ಸ್ವಸ್ತಿಕವನ್ನು ಧರಿಸಿ ಒಂದು ಸಮಾರಂಭಕ್ಕೆ ಹಾಜರಾದ. 70 ಜನ ಕಟ್ಟಾ ಸದಸ್ಯರನ್ನು, 400 ಹಿತೈಷಿಗಳನ್ನು ಹೊಂದಿದ ತನ್ನ ಗುಂಪಿಗೆ ಆತ ಫ್ಯೂರರ್ ಅಥವಾ ನಾಯಕನಾದ ಈ ಗುಂಪಿನ ಧ್ಯೇಯ ಪ್ರಜಾಸತ್ತೆಯನ್ನು ಕಿತ್ತೆಸೆದು ಸರ್ವಾಧಿಕಾರೀ ಫ್ಯೂರರ್ ಪ್ರಭುತ್ವವನ್ನು ಸ್ಥಾಪಿಸುವುದು. ಈ ಗುಂಪು ಸೈನಿಕ ಕವಾಯತು ಅಭ್ಯಾಸ ಮಾಡುವುದು ಮಾತ್ರವಲ್ಲದೇ ಎಡಪಂಥೀಯ ಪುಸ್ತಕದಂಗಡಿಗಳನ್ನು ನಾಶಗೊಳಿಸುವುದು, ರಾಜಕೀಯ ಸಭೆಗಳನ್ನು ಚದುರಿಸುವುದು ಹಾಗೂ ಎಡಪಂಥೀಯ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸುವುದು ಇವನ್ನೂ ಮಾಡುತ್ತಿದ್ದವು. ತನ್ನ ಗುಂಪಿಗೆ ಬೇರೆ ದೇಶಗಳಲ್ಲಿರುವ ಬಲಪಂಥೀಯ ಗುಂಪುಗಳೊಂದಿಗೆ ಸಂಬಂಧವಿದೆಯೆಂದು ಒಂದು ಟೆಲಿವಿಷನ್ ಸಂದರ್ಶನದಲ್ಲಿ ಒಪ್ಪಿಕೊಳ್ಳುವಷ್ಟು ಹಾಫ್‌ಮನ್ ತನ್ನ ಭಂಡತನ ಪ್ರದರ್ಶಿಸಿದ್ದಾನೆ.

(5ನೇ ಪುಟ ನೋಡಿ)

ಫ್ರಾನ್ಸ್‌ನಲ್ಲಿ ಮೂರು ತಿಂಗಳಲ್ಲಿ ೪೦ ಹಲ್ಲೆಗಳು

ಕಳೆದ ಮೂರು ತಿಂಗಳಲ್ಲಿ ಫ್ರಾನ್ಸಿನಲ್ಲಿ ನವ-ನಾಝಿ ಗುಂಪುಗಳಿಂದ 40 ಹಲ್ಲೆಗಳು ನಡೆದಿವೆ; 1975ರಿಂದ ಒಟ್ಟು 120 ಇಂತಹ ಘಟನೆಗಳಾಗಿವೆ. ಹಿಂದೆ ಹೇಳಿದ ಪ್ಯಾರಿಸ್‌ನ ಯಹೂದಿ ಪ್ರಾರ್ಥನಾ ಮಂದಿರದ ಬಾಂಬ್ ಸ್ಫೋಟಕ್ಕಿಂತ ಕೆಲವು ದಿನಗಳ ಹಿಂದೆ ನಾಝಿ ಗುಂಪುಗಳು ಎರಡು ಶಾಲೆಗಳೂ ಸೇರಿದಂತೆ ನಾಲ್ಕು ಯಹೂದಿ ಧರ್ಮೀಯರ ಕಟ್ಟಡಗಳ ಮೇಲೆ ಧಾಳಿ ನಡೆಸಿದ್ದವು ಎರಡು ದಿನಗಳ ನಂತರ ಪ್ಯಾರಿಸ್ಸಿನ ಲ್ಯಾಸಿನ್ ಸ್ಕ್ವೇರ್ ಎಂಬಲ್ಲಿ ನಿಲ್ಲಿಸಲ್ಪಟ್ಟ ಒಂದು ಕಾರಿನಲ್ಲಿ ಬಾಂಬ್ ಸಿಡಿದು ಡಚ್ ಮಹಿಳಾ ಪ್ರವಾಸಿಯೊಬ್ಬಳು ಗಾಯಗೊಂಡಳು. ಅವಳ ಎರಡೂ ಕಾಲುಗಳನ್ನು ಕತ್ತರಿಸಬೇಕಾಗಿ ಬಂತು. ಫ್ರಾನ್ಸಿನ ಇತರೆಡೆಗಳಿಂದಲೂ ಹಲವು ಹಿಂಸಾಕೃತ್ಯಗಳು ವರದಿಯಾಗಿವೆ.

ಆದರೆ ಪೋಲೀಸರು ನಾಝಿ ಕೃತ್ಯಗಳಿಗೆ ಪ್ರೋತ್ಸಾಹ ನೀಡಿ ಅವನ್ನೆಲ್ಲಾ ಮುಚ್ಚಿಹಾಕಿದರು ಎಂಬುದಂತೂ ಇವೆಲ್ಲದಕ್ಕಿಂತ ಹೆಚ್ಚು ಆಚ್ಚರಿಯುನ್ನುಂಟುಮಾಡುತ್ತದೆ. ಇಟೆಲಿಯಲ್ಲಿನ ಬೊಲೊಗ್ನಾ ರೈಲು ನಿಲ್ದಾಣದ ಬಾಂಬ್ ಸಿಡಿತದ ಘಟನೆಯ ನಂತರ ನಡೆದ ವಿಚಾರಣೆಯಲ್ಲಿ ಪಾಲ್ ಲೂಯಿ ದುರಾಂಡ್ ಎಂಬ ಪೋಲೀಸ್ ಇನ್ಸ್‌ಪೆಕ್ಟರ್ ಇಟೆಲಿಯ ಬಲಪಂಥೀಯ ಭಯೋತ್ಪಾದಕರೊಂದಿಗೆ ಸಂಪರ್ಕ ಪಡೆದಿದ್ದು ಹಿಂದೆ ಹೇಳಿದ ಯುರೋಪಿನ ಫ್ಯಾಸಿಸ್ಟ್ ಸಂಘಟನೆಯಾದ FANE ಯ ರಾಜಕೀಯ ಸಮಿತಿಯ ಸದಸ್ಯನೂ ಆಗಿದ್ದ ಎಂಬಂಶ ಬೆಳಕಿಗೆ ಬಂತು.

ಫ್ರಾನ್ಸ್ ಹಾಗೂ ಇಟಾಲಿಯನ್ ಈ ಎರಡೂ ದೇಶಗಳ ಪೋಲೀಸ್ ಪಡೆಗಳಲ್ಲಿ ಅತಿಬಲಪಂಥೀಯರ ಹಿತೈಷಿಗಳು ಹಾಗೂ ಬೆಂಬಲಿಗರು ಒಳಗೆ ಸೇರಿಕೊಂಡಿದ್ದರು. ಇವರಲ್ಲಿ ಕೆಲವರು ಉನ್ನತ ಸ್ಥಾನಗಳಲ್ಲಿ ಇದ್ದಾರೆ. ಉದಾಹರಣೆಗೆ ಒಬ್ಬ ಸಕ್ರಿಯ ನವಫ್ಯಾಸಿಸ್ಟ್ ಫ್ರೆಂಚ್ ಪೋಲೀಸ್ ಪಡೆಯ ಸಿಬ್ಬಂದಿ ವಿಭಾಗದ ಹಿರಿಯ ಸದಸ್ಯನಾಗಿದ್ದಾನೆ.

ಫ್ರಾನ್ಸಿನ ಪೋಲೀಸ್ ಟ್ರೇಡ್ ಯೂನಿಯನ್‌ಗಳ ಸ್ವಯಮಾಧಿಕಾರಿ ಮಹಾಸಂಘವು ಆಂತರಿಕ ಮಂತ್ರಿ ಬಾನೆಟ್ ಅವರಿಗೆ FANE ಫ್ಯಾಸಿಸ್ಟ್ ಸಂಘಟನೆಯ 150 ಸದಸ್ಯರ ಪಟ್ಟಿಯನ್ನು ಕೊಟ್ಟಿತ್ತು. ಇದರಲ್ಲಿ 30 ಜನ ಪೋಲೀಸ್ ಅಧಿಕಾರಿಗಳೂ ಸೇರಿದ್ದಾರೆ. ಹೀಗಿರುವಾಗ ಬಲಪಂಥೀಯ ಉಗ್ರಗಾಮಿಗಳ ಅಪರಾಧಗಳ ತನಿಖೆ ಹಾಗೂ ಅಪರಾಧಿಗಳನ್ನು ಹಿಡಿಯುವಲ್ಲಿ ಪೋಲೀಸ್ ಮೇಲಧಿಕಾರೀ ವರ್ಗ ಸಂತೃಪ್ತ ಮನೋಭಾವದಿಂದಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ.

ಪೋಲೀಸ್ ಪಡೆಯ ಒಳಗೆ ನುಸುಳಿಕೊಂಡಿದ್ದಾರೆ

ನಿಜವಾಗಿ, ಪ್ಯಾರಿಸ್ ಪ್ರಾರ್ಥನಾ ಮಂದಿರದ ಬಾಂಬ್ ಸ್ಫೋಟದ ಘಟನೆಯ ತನಿಖೆಯನ್ನು ಅಪರಾಧಗಳ ಬ್ರಿಗೇಡ್‌ಗೆ ಒಪ್ಪಿಸಿ ಆ ಬ್ರಿಗೇಡ್ ತನಿಖೆ ಆರಂಭಿಸುತ್ತಿರುವಂತೆಯೇ ಬಲಉಗ್ರಗಾಮಿ ಗುಂಪುಗಳ ಬಗೆಗಿನ ಫೈಲುಗಳು ಖಾಲಿಯಾದದ್ದು ಕಂಡು ಬಂತು. ಈ ಫೈಲುಗಳನ್ನು ಡಿಸೆಂಬರ್ 1979 ರಲ್ಲೇ ತಯಾರಿಸಲಾಗಿತ್ತು. ಆದ್ದರಿಂದ ಈ ಬ್ರಿಗೇಡ್ ತನ್ನ ಕೆಲಸವನ್ನು ಮೊದಲಿನಿಂದಲೇ ಆರಂಭಿಸಬೇಕಾಯ್ತು. ಫ್ರೆಂಚ್ ಪೋಲೀಸ್ ಪಡೆಯೊಳಗೆ ಹೀಗೆ ಬಲಪಂಥೀಯ ಬೆಂಬಲಿಗರು ಸೇರಿಕೊಳ್ಳುವುದು 1968 ರಿಂದಲೇ ಪ್ರಾರಂಭವಾಗಿತ್ತು. ಆಗ ಕಾರ್ಮಿಕ ಸಂಘಟನೆಗಳು ಹಾಗೂ ಎಡಪಂಥೀಯ ಚಳವಳಿಯೊಳಗೆ ತಮಗೆ ಸುಳಿವು ಕೊಡುವವರನ್ನು ತುಂಬಿಸುವುದರಲ್ಲಿ ಪೋಲೀಸರು ಮಗ್ನರಾಗಿದ್ದರು. ಹಾಗೆ ಸೇರಿಸಲ್ಪಟ್ಟ ಕೆಲವು ವಿದ್ಯಾರ್ಥಿಗಳು ಮುಂದೆ ಎಡಪಂಥೀಯರೊಡನೆ ಹೋರಾಡುವ ಪೋಲೀಸ್ ಉದ್ಯೋಗವನ್ನು ಸೇರಿದರು.

ಯಹೂದಿ ಪ್ರಾರ್ಥನಾ ಮಂದಿರದ ಬಾಂಬ್ ಸಿಡಿತದ ವಿರುದ್ಧ ಪ್ಯಾರಿಸ್‌ನ ಜನ ತಮ್ಮ ಪೂರ್ಣ ಧಿಕ್ಕಾರವನ್ನು ಪ್ರದರ್ಶಿಸಿದ್ದಾರೆ. ಬಾಂಬ್ ಸಿಡಿದ ಕೆಲವೇ ಗಂಟೆಗಳೊಳಗೆ ಜನ ಸ್ವಯಂಸ್ಫೂರ್ತಿಯಿಂದ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಿದರು. ಮರುದಿನ ಬೆಳಗ್ಗೆ 15 ಸಾವಿರ ಜನರ ಮೆರವಣಿಗೆ ಹಾಗೂ ಸಂಜೆ 20 ಸಾವಿರ ಜನರ ಮೆರವಣಿಗೆ ನಡೆಯಿತು. ಶುಕ್ರವಾರ ನಡೆದ ಬಾಂಬ್ ಘಟನೆಯ ನಂತರ ಮಂಗಳವಾರದಂದು ಎಡಪಂಥೀಯ ಪರಂಪರಾಗತ ಮಾರ್ಗವಾದ ಪ್ಲ್ಯಾಲೇಸ್ ಡೆ ಲಾ ನೇಶನ್‌ನಿಂದ ಬ್ಯಾಸ್ಟಿಲ್ ವರೆಗೆ ಒಂದು ಲಕ್ಷ ಜನರ ದೀರ್ಘವಾದ ಮೆರವಣಿಗೆಯನ್ನು ಸುಮಾರು ಒಂದು ಡಜನ್‌ನಷ್ಟು ಕಮ್ಯುನಿಸ್ಟ್ ಪ್ರತಿನಿಧಿ ಮಂಡಲಗಳು ನಡೆಸಿದವು. 1960 ರಿಂದೀಚೆಗೆ ಇದು ಅತ್ಯಂತ ದೊಡ್ಡದಾದ ಮತಪ್ರದರ್ಶನವಾಗಿತ್ತು. ಬಹುಶಃ ಎರಡನೇ ಮಹಾಯುದ್ಧದ ಈಚೆಗೂ ಇಷ್ಟು ದೊಡ್ಡ ಮತಪ್ರದರ್ಶನ ನಡೆದಿರಲಿಕ್ಕಿಲ್ಲ. ಭಯೋತ್ಪಾದನೆಯ ವಿರುದ್ಧ ಪ್ರತಿಕ್ರಿಯೆ ಎಷ್ಟು ತೀವ್ರವಾಗಿತ್ತೆಂದರೆ ಸರಕಾರವನ್ನು ಬೆಂಬಲಿಸುವ ಪಕ್ಷಗಳೂ ಮೆರವಣಿಗೆಯಲ್ಲಿ ಪಾಲುಗೊಂಡವು. ಮತ್ತು ಅಲ್ಲಿನ ವಿಧಾನ ಸಭೆಯೂ ತನ್ನ ಸದಸ್ಯರು ಮೆರವಣಿಗೆಯಲ್ಲಿ ಪಾಲುಗೊಳ್ಳಲು ಅನುಕೂಲವಾಗುವಂತೆ ತನ್ನ ಅಧಿವೇಶನವನ್ನು ಸ್ಥಗಿತಗೊಳಿಸಿತು.

ಅತಿಪ್ರಸರಣ, ಆರ್ಥಿಕ ಹಿಂಜರಿತ ಹಾಗೂ ಬೆಳೆಯುತ್ತಿರುವ ನಿರುದ್ಯೋಗ ಇವುಗಳೆಲ್ಲದರ ಮೂಲಕ ಪ್ರಕಟವಾಗುತ್ತಿರುವ ಆರ್ಥಿಕ ಬಿಕ್ಕಟ್ಟು ಪಶ್ಚಿಮ ಯುರೋಪನ್ನು ಹೆಚ್ಚೆಚ್ಚು ಆವರಿಸಿಕೊಳ್ಳುತ್ತಿರುವಾಗ ಪರಿಸ್ಥಿತಿಯ ಲಾಭ ಪಡೆಯಲು ಬಲಪಂಥೀಯ ಪ್ರತಿಗಾಮಿಗಳಿಗೆ ಅವಕಾಶ ಸಿಕ್ಕಿದೆ. ಆದ್ದರಿಂದ ಅವರು ಪ್ರತಿಗಾಮಿ ರಾಷ್ಟ್ರೀಯ ಭಾವನೆಗಳನ್ನು, ಜನಾಂಗ ಬೇಧ ನೀತಿಯನ್ನು ಹಾಗೂ ಅಲ್ಪಸಂಖ್ಯಾತರ, ವಿಶೇಷವಾಗಿ ಯಹೂದಿ ಜನರ ವಿರುದ್ಧ ದ್ವೇಷವನ್ನು ಉತ್ತೇಜಿಸುತ್ತಿದ್ದಾರೆ, ಅಲ್ಲದೆ ವಲಸೆಗಾರ ಕಾರ್ಮಿಕರೂ, ವಿಶೇಷವಾಗಿ ಕರಿಯರು ಹಾಗೂ ವರ್ಣೀಯರೂ, ಈ ನಾಝಿ ಹಲ್ಲೆಗಳಿಗೆ ಗುರಿಯಾಗಿದ್ದಾರೆ. ಬಲಪಂಥೀಯ ಭಯೋತ್ಪಾದಕ ಕೃತ್ಯಗಳಲ್ಲಿ ಕೊಲೆಯಾಗುವ ಕಮ್ಯುನಿಸ್ಟರು, ಪ್ರಗತಿಶೀಲರು ಹಾಗೂ ಪ್ರಜಾಪ್ರಭುತ್ವವಾದಿಗಳು ಸರ್ವಾಧಿಕಾರಿ ಆಡಳಿತವನ್ನು ಹಾಗೂ ಜನಾಂಗ ಭೇದ ಹಿಂಸಾಚಾರದ ನೀತಿಯನ್ನು ಸ್ಥಾಪಿಸಬೇಕೆಂಬ ನಾಝೀಜನಗಳ ಮುಖ್ಯ ಗುರಿಯಾಗಿಬಿಡುತ್ತಾರೆ. ಈ ಮೂಲಕ ನಾಝಿಗಳು ಬಿಕ್ಕಟ್ಟಿಗೊಳಗಾದ ಬೂರ್ಜ್ವಾವರ್ಗಕ್ಕೆ ರಕ್ಷಣೆ ಕೊಡುತ್ತಲಿದ್ದಾರೆ.

ಆಳುವ ವರ್ಗದ ಉತ್ತೇಜನ

ಆರ್ಥಿಕ ಬಿಕ್ಕಟ್ಟು ಹೆಚ್ಚುತ್ತಾ ಹೋದಂತೆ ಒಂದು ಕಡೆ ಬಂಡವಾಳಶಾಹೀ ವ್ಯವಸ್ಥೆ ಹತೋಟಿ ತಪ್ಪಿ ಹೋಗುವ ಬೆದರಿಕೆ ಆರಂಭವಾಗುತ್ತದೆ; ಇನ್ನೊಂದೆಡೆ ಆಂತರಿಕ ಹಾಗೂ ಸಾಮ್ರಾಜ್ಯಶಾಹೀ ವಲಯಗಳ ವಿದೇಶ ಧೋರಣೆಗಳಿಂದಾಗಿ ತಮ್ಮ ಮೇಲೆ ಹೆಚ್ಚುತ್ತಿರುವ ಹೊರೆಯ ವಿರುದ್ಧ ದುಡಿಯುವ ಜನರ ಪ್ರತಿಭಟನೆಯೂ ಹೆಚ್ಚುತ್ತಾ ಹೋಗುತ್ತದೆ. ಆಗ ದುಡಿಯುವ ಜನರ ಗಮನವನ್ನು ಹೆಚ್ಚುತ್ತಿರುವ ಶೋಷಣೆಯ ನಿಜವಾದ ಸಮಸ್ಯೆಗಳಿಂದ ಬೇರೆಡೆಗೆ ಹೊರಳಿಸಲು ಆಳುವ ವಲಯಗಳೇ ಫ್ಯಾಸಿಸ್ಟ್ ಹಿಂಸಾಚಾರವನ್ನು ಪ್ರೋತ್ಸಾಹಿಸುತ್ತವೆ.

ಇಟೆಲಿಯ ಸೆನೇಟಿನ ಅಧ್ಯಕ್ಷ ಹಾಗೂ ಕ್ರಿಶ್ಚಿಯನ್ ಡೆಮೋಕ್ರಾಟಿಕ್ ಪಕ್ಷದ ಬಲಪಂಥೀಯ ನಾಯಕನಾದ ಅಮಿಂತೋರ್ ಫನ್‌ಫನೀ ಎಂಬಾತ ಬೋಲೋಗ್ನಾ ರೈಲ್ವೇ ನಿಲ್ದಾಣದ ಬಾಂಬ್ ಸಿಡಿತದ ಘಟನೆಯನ್ನು ವಿರೋಧಿಸಿ ಸಂಯುಕ್ತ ಕಾರ್ಮಿಕ ಸಂಘಟನೆಗಳ ಮಹಾಸಂಘ ನಡೆಸಿದ ರಾಷ್ಟ್ರೀಯ ಮುಷ್ಕರವನ್ನು ಖಂಡಿಸಿರುವುದನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ ಈ ಬಲಪಂಥೀಯ ನಾಯಕನ ಪ್ರಕಾರ "ದೇಶದ ಅರ್ಥವ್ಯವಸ್ಥೆಗೆ ಈ ಮುಷ್ಕರ ಹಾನಿ ತಂದಿತು," ಇಂತಹ ನಿಲುವು ದುಡಿಯುವವರಿಗಿಂತ ಬಲಶಾಲಿ ಹಾಗೂ ಒಗ್ಗಟ್ಟಾಗುವುದನ್ನು ತಪ್ಪಿಸುವಲ್ಲಿ ಆಳುವವರ್ಗಗಳವರು, ಪ್ರತಿಗಾಮಿಗಳು ಎಸಗುವ ಅಪರಾಧಗಳನ್ನೂ ನಿಸ್ಸಂಕೋಚವಾಗಿ ಕ್ಷಮಿಸಿಬಿಡುತ್ತಾರೆ ಎಂಬುದನ್ನು ತೋರಿಸುತ್ತದೆ.

ಫ್ರಾನ್ಸ್‌ನ 'ಜನಾಂಗ ಭೇದ ನೀತಿಯ ವಿರುದ್ಧ ಚಳುವಳಿ' ಎಂಬ ಸಂಘಟನೆಯ ಕಾರ್ಯದರ್ಶಿ ಅಲ್ಬರ್ಟ್ ಲೆವಿ ಎಂಬವರು, "ಅಧಿಕಾರದಲ್ಲಿರುವವರಿಗೆ ಫ್ಯಾಸಿಸ್ಟ್ ಗುಂಪುಗಳು ತುಂಬಾ ಉಪಯುಕ್ತವಾಗಿವೆ. ಏಕೆಂದರೆ 1930ರ ದಶಕದಲ್ಲಿ ನಡೆದಂತೆ ಅವರು ನಮ್ಮೆಲ್ಲಾ ಸಮಸ್ಯೆಗಳಿಗೆ ವಿದೇಶೀಯರು ಅಥವಾ ಯಹೂದಿ ಜನರು ಕಾರಣವೆಂದು ಆಪಾದಿಸಿ ನಿಜವಾದ ಹೋರಾಟಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುತ್ತಾರೆ" ಎಂದಿದ್ದಾರೆ.

●

ಬಸವಲಿಂಗಪ್ಪನವರ ಹೇಳಿಕೆ ಖಂಡನೆ

ಹುಬ್ಬಳ್ಳಿಯಲ್ಲಿ ಶ್ರೀ ಬಸವಲಿಂಗಪ್ಪನವರು ರೈತರ ಬೇಡಿಕೆಗಳಾದ ನೀರಾವರಿ ತೆರಿಗೆ ಮತ್ತು ಅಭಿವೃದ್ಧಿ ತೆರಿಗೆ ರದ್ದುಪಡಿಸುವುದು ಹಾಗೂ ಕೃಷಿ ಉತ್ಪನ್ನಗಳಿಗೆ ಬೆಂಬಲದ ಬೆಲೆ ನೀಡುವುದರ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿರುವುದು ಶೋಚನೀಯ ಎಂದು ಕೋಲಾರ ಜಿಲ್ಲಾ ರೈತರ ಹೋರಾಟ ಸಮಿತಿ ಸಂಚಾಲಕ ಕಾಂ. ಲಕ್ಷ್ಮಣ ರೆಡ್ಡಿಯವರು ಬಸವಲಿಂಗಪ್ಪನವರ ಹೇಳಿಕೆಯನ್ನು ಖಂಡಿಸಿದ್ದಾರೆ.

ಸರ್ಕಾರ ರಾಜ್ಯದ ರೈತರ ಹೋರಾಟದ ಪರವಾಗಿ 19ಜಿಲ್ಲೆಗಳಲ್ಲಿ ನೀರಾವರಿ ತೆರಿಗೆ, ಅಭಿವೃದ್ಧಿ ತೆರಿಗೆ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಜಮೀನು ಪರಿಶೀಲನಾ ಸಮಿತಿಗಳನ್ನು ನೇಮಿಸಿ, ಈಗಿರುವ ದರಗಳನ್ನು ಪುನರ್ ವಿಮರ್ಶಿಸಲಾಗುವುದೆಂದು ಮಾತ್ರ ಹೇಳಿದೆ ನಮ್ಮ ಜಿಲ್ಲೆಯಲ್ಲಿ ಯಾವ ದೊಡ್ಡ ನೀರಾವರಿ ಇಲ್ಲದಿದ್ದರೂ ಸರ್ಕಾರ ಕಾಲುವೆಯಿಂದ ನೀರನ್ನು ಒಂದು ಎಕರೆ ಬೆಳೆ ಇಡದೇ ನಿರಂತರ ಕ್ಷಾಮಕ್ಕೆ ಸಿಕ್ಕಿರುವಾಗ 1965-66ರಿಂದ ಒಂದು ಎಕರೆ ಬತ್ತದ ಬೆಳೆಗೆ 64 ರೂಪಾಯಿಗಳು ಮತ್ತು ರೇಷ್ಮೇ ಬೆಳೆಗೆ 60 ರೂಪಾಯಿಗಳು, ಕಬ್ಬಿನ ಬೆಳೆಗೆ 80 ರೂಪಾಯಿಗಳು ವಸೂಲು ಮಾಡುತ್ತಿರುವುದು ಸರಿಯೆ ?

ಕೃಷಿ ಉತ್ಪನ್ನಗಳ ಬಗ್ಗೆ ಸರ್ಕಾರ ನಿಗದಿಪಡಿಸಿರುವ ಬೆಂಬಲದ ಬೆಲೆ ಈ ರೀತಿ ಇದೆ, ಬತ್ತ ರೂ. 110.00, ರಾಗಿ ರೂ. 115.00, ಜೋಳ 105.00 ರೂ.ಗಳು ಇವೆ. ಈಚೆಗೆ ರೈತರು ಉಪಯೋಗಿಸುವ ಉಪಕರಣಗಳು, ರಾಸಾಯನಿಕ ಗೊಬ್ಬರಗಳು ಕ್ರಿಮಿನಾಶಕಗಳು ಮತ್ತು ವಿದ್ಯುಚ್ಛಕ್ತಿಯ ದರ ಇನ್ನೂ ಅನೇಕ ಖರ್ಚುಗಳು ಶೇಕಡಾ 50ರಷ್ಟು ಹೆಚ್ಚಿರುವುದರಿಂದ ಸರ್ಕಾರ ಕೊಟ್ಟಿರುವ ಬೆಂಬಲದ ಬೆಲೆ ಆ ಧಾನ್ಯಗಳನ್ನು ಉತ್ಪತ್ತಿ ಮಾಡುವುದಕ್ಕೆ ತಗಲುವ ಖರ್ಚಿಗಿಂತ ಬಹಳ ಕಡಿಮೆ ಇದೆ.

ಶ್ರೀ ಸಾವಕಾನ್ಯನಿಗೆ ತೆರಿಗೆ ಹೊರೆ ಜಾಸ್ತಿಯಾಗಿ, ಕೃಷಿ ಕಾರ್ಮಿಕನ ಜೀವನ ದುರ್ಬಲವಾಗುತ್ತೆ ಎಂದು ಮೊಸಳೆ ಕಣ್ಣೀರು ಸುರಿಸಿರುವುದು ಅಚ್ಚರಿಯ ವಿಷಯ. ವಿದೇಶಗಳಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಸಾಲ ತಂದು ಕೋಟ್ಯಾಧೀಶರ ಜೇಬಿಗೆ ಹೋದಾಗ ಮತ್ತು ಅಂತಹ ಬಂಡವಾಳಶಾಹಿಗಳಿಗೆ 1,800 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದಾಗ ದೊಡ್ಡ ನೀರಾವರಿ ಯೋಜನೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಾಗ ಇದರ ಪ್ರಭಾವ ಶ್ರೀಸಾಮಾನ್ಯನ ಮೇಲೆ ಬೀಳಲಿಲ್ಲವೇ ? ಆಗ ಚಕಾರವೆತ್ತಿದ ಬಸವಲಿಂಗಪ್ಪನವರು ಮಂತ್ರಿಗಳಾದಾಗ ರಾಜ್ಯದ ಒಂದೂವರೆ ಕೋಟಿ ಕೃಷಿ ಕಾರ್ಮಿಕರ ಏಳಿಗೆಗಾಗಿ ಕೆಲಸ ಮಾಡಲು ಪುರುಸೊತ್ತು ಇರಲಿಲ್ಲವೆ ? ಅಧಿಕಾರದಲ್ಲಿದ್ದಾಗ ದೊಡ್ಡ ಸಮಾಜವಾದಿಯಂತೆ ವರ್ತಿಸಿ ಕಾರ್ಮಿಕರ ಬಗ್ಗೆ ಕನಿಷ್ಠ ವೇತನ ಜಾರಿಗೊಳಿಸಲು ಮನಸ್ಸಿಲ್ಲದಿರುವಾಗ ಕಾರ್ಮಿಕರ ಬಗ್ಗೆ ಮಾತನಾಡುವುದಕ್ಕೆ ನೈತಿಕ ಅರ್ಹತೆ ಕಳೆದುಕೊಂಡಿದ್ದೀರಿ. ಆದ್ದರಿಂದ ಮೇಲ್ಕಂಡ ರೈತರ ಬೇಡಿಕೆಗಳ ಬಗ್ಗೆ ಅದರ ವಾಸ್ತವಾಂಶ ಅರಿವಿಲ್ಲವೆಂದು ಭಾಸವಾಗುತ್ತದೆ. ರೈತ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸಿ ಯಾವುದೋ ರಾಜಕೀಯ ಪ್ರತಿಫಲ ಅಪೇಕ್ಷೆಗೋಸ್ಕರ ಸರ್ಕಾರದ ಬಾಲಬಡುಕನಂತೆ ವರ್ತಿಸುವುದು ಖಂಡನೀಯ.

●

ಕೋಲಾರ ಜಿಲ್ಲಾ ರೈತರ ಹೋರಾಟ ಸಮಿತಿ

ಕೋಲಾರ ಜಿಲ್ಲಾ ರೈತರ ಹೋರಾಟ ಸಮಿತಿ ಸಭೆಯನ್ನು ತಾ. 7-11-80ರಂದು ಕೋಲಾರ ಜಿಲ್ಲಾ ರೈತಸಂಘದ ಆಫೀಸಿನಲ್ಲಿ ಶ್ರೀ ಪಿ. ವೆಂಕಟಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗೆ ಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1. ಕೋಲಾರ ಜಿಲ್ಲಾ ವಿರೋಧ ಪಕ್ಷಗಳ ರೈತರ ಕ್ರಿಯಾ ಸಮಿತಿ ಎಂಬ ಹೆಸರನ್ನು ಕೋಲಾರ ಜಿಲ್ಲಾ ರೈತರ ಹೋರಾಟ ಸಮಿತಿ ಎಂದು ಬದಲಾವಣೆ ಮಾಡಲು ತೀರ್ಮಾನಿಸಲಾಯಿತು.

2. ಕೋಲಾರ ಜಿಲ್ಲೆಯ ರೈತರ ಹೋರಾಟವನ್ನು 10-11-80 ರಿಂದ ಜಿಲ್ಲಾದ್ಯಂತ ತೀವ್ರಗೊಳಿಸಲು ತೀರ್ಮಾನಿಸಲಾಯಿತು. ಮತ್ತು ರೈತರ ಹೋರಾಟದಲ್ಲಿ ಎಲ್ಲಾ ರೈತರು ಭಾಗವಹಿಸಬೇಕಾಗಿ ಕೋರಲಾಯಿತು.

3. ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸಾಲಗಳನ್ನು ಮನ್ನಾ ಮಾಡುವುದಾಗಿ ಸರ್ಕಾರ ಹೇಳಿ ಈ ತಿಂಗಳು 10-11-80ರ ಒಳಗೆ ಅರ್ಜಿಗಳನ್ನು ಹಾಕಬೇಕೆಂದು ನಿಗದಿ ಮಾಡಿರುವುದು ಸರಿಯಷ್ಟೆ. ಆದ್ದರಿಂದ ಕಾಲಾವಕಾಶ ಕಡಿಮೆ ಇರುವುದರಿಂದ ಈ ತಿಂಗಳು 30-11-80ರವರೆಗೆ ಕಾಲಾವಧಿಯನ್ನು ಮುಂದುವರಿಸಬೇಕು, ಅಲ್ಲದೇ ರೈತರಿಗೆ ಸಾಲ ಮನ್ನಾ ಮಾಡಲು ವಿಧಿಸಿರುವ ಷರತ್ತುಗಳನ್ನು ಪೂರೈಸಲು ಯಾವ ರೈತನಿಗೂ ಸಾಧ್ಯವಿಲ್ಲದೇ ಇರುವುದರಿಂದ ಬೇಷರತ್ತಾಗಿ ರೈತರ ಸಾಲಗಳನ್ನು ರದ್ದು ಮಾಡಬೇಕೆಂದು ಈ ಸಭೆಯು ಸರ್ಕಾರವನ್ನು ಒತ್ತಾಯ ಪಡಿಸುತ್ತದೆ.

○

ನಾರಾಯಣಸ್ವಾಮಿ ನಾಯ್ಡು: ನಿಜರೂಪ

[ಇತ್ತೀಚೆಗೆ ನರಗುಂದದಿಂದ ಹಿಡಿದು ರಾಜ್ಯಾದ್ಯಂತ ಪಸರಿಸಿದ ರೈತರ ಹೋರಾಟದ ಮುಂಚೂಣಿಯಲ್ಲಿರುವ ಕೆಲವರು "ರಾಜಕೀಯ ಪಕ್ಷಗಳು ಈ ಹೋರಾಟದ ನೇತೃತ್ವ ವಹಿಸುವುದು ಬೇಡ" ಎಂಬ ವಾದವನ್ನು ಮುಂದೊಡ್ಡುತ್ತಿದ್ದಾರೆ. ನರಗುಂದ ರೈತರ ಹೋರಾಟ ಬಿರುಸಾಗಿ ನಡೆಯುತ್ತಿದ್ದಾಗ ಮಹಾನ್ ಮುಖಂಡರೆನಿಸಿದ್ದ ಶ್ರೀಮಾನ್ ನಾರಾಯಣಸ್ವಾಮಿ ನಾಯ್ಡು ಕರ್ನಾಟಕದಲ್ಲಿ ಅಂತಹ ಕರ್ನಾಟಕದ ರೈತಸಂಘಟನೆಯ ಪಿತಾಮಹ ತಾನೆಂಬಂತೆ ಅನೇಕ ಕಡೆ ಓಡಾಡಿ ಭಾಷಣ ಮಾಡಿದ್ದನ್ನು ಜನತೆ ಮರೆತಿಲ್ಲ. ಪೋಲೀಸ್ ಗೋಲಿಬಾರ್‌ನಿಂದ ಮಡಿದ ರೈತಬಾಂಧವರಿಗೆ ಸ್ವಲ್ಪ ಹಣಸಹಾಯ ಮಾಡಿ ಹುತಾತ್ಮ ಸ್ತೂಪಗಳನ್ನು ಕಟ್ಟಿಸುತ್ತೇವೆ ಎಂದು ಯೋಜನೆ ಹಾಕಿಕೊಂಡಿದ್ದೂ ಉಂಟು. ಈ ಮಹಾತ್ಮ ತನ್ನ ನಾಡಿನಲ್ಲಿ ಪ್ರತಿನಿಧಿಸುತ್ತಿರುವ ರೈತವರ್ಗ, ಚಟುವಟಿಕೆಯನ್ನು ಪರಿಚಯಿಸುವುದು ಈ ಲೇಖನದ ಉದ್ದೇಶ—]

ಜಮೀನ್ದಾರಿ ರೈತರ, ನಾರಾಯಣಸ್ವಾಮಿ ನಾಯ್ಡು ನೇತೃತ್ವದ ಸಂಘಟನೆ ಕೆಲವು ದಿನಗಳಿಂದ ತಮಿಳುನಾಡಿನಲ್ಲಿ ಪ್ರಚಾರದ ಪರಾಕಾಷ್ಠೆಯಲ್ಲಿತ್ತು. ಇತ್ತೀಚಿನ ಕೆಲವು ಘಟನೆಗಳು ಈ ಸಂಘಟನೆಯ ನಿಜರೂಪವನ್ನು ಬಯಲು ಮಾಡಿವೆ.

ದೊಡ್ಡ ಭೂಮಾಲಕರ ಸಹಕಾರಿ ಮತ್ತಿತರ ಸಾಲಗಳನ್ನು ರದ್ದುಗೊಳಿಸಲೋಸುಗ, ಚಿಕ್ಕ ಮತ್ತು ಮಧ್ಯಮ ವರ್ಗದ ರೈತರ ಹಿತಸಾಧನೆ ಮಾಡುತ್ತೇನೆಂದು ಹೋರಾಟದ ಕಣಕ್ಕಿಳಿಸಲಾಗಿದ್ದಿತು. ತಮಿಳುನಾಡಿನ ಬಡ ಮತ್ತು ಮಧ್ಯಮವರ್ಗದ ರೈತವರ್ಗ ಬೆಲೆಏರಿಕೆ, ವಿಪರೀತ ತೆರಿಗೆ ಹೊರೆ, ಉತ್ಪಾದಿಸಿದ ಬೆಳೆಗೆ ಯೋಗ್ಯವಾದ ಬೆಲೆ ನಿಗದಿಯಿಲ್ಲದಿರುವುದು ಮುಂತಾದ ತೊಂದರೆಗಳಿಂದ ತತ್ತರಿಸುತ್ತಿದ್ದು, ತನ್ನದೇ ಆದ ಸಂಘಟನೆ ಇಲ್ಲದ ಕಾರಣ ನಾರಾಯಣಸ್ವಾಮಿ ನಾಯ್ಡು ನೇತೃತ್ವದ ಸಂಘಟನೆ ಈ ವರ್ಗವನ್ನು ಸಹಜವಾಗಿ ಆಕರ್ಷಿಸಿತ್ತು. ಈ ಮುಗ್ಧ ಜನರನ್ನು ತಮ್ಮ ಹಿತಸಾಧನೆಗೋಸ್ಕರ ಪೋಲೀಸ್ ಗೋಲಿಬಾರನ್ನು ಎದುರಿಸಲು ಉಪಯೋಗಿಸಲಾಯಿತು.

ಭಯೋತ್ಪಾದಕ ಕ್ರಮಗಳು

ಕೆಲವು ದಿನಗಳ ಹಿಂದೆ ತಿರುಚಿ ಜಿಲ್ಲೆಯ ಪೆರಂಬಲ್ಲೂರ ಎಂಬ ಹಳ್ಳಿಗೆ ಕೋರ್ಟಿನ ಬಡಪಾಯಿ ನೌಕರನು ಕೋರ್ಟ್ ಸಮನ್ಸ್ ಕೊಡಲು ಹೋದಾಗ ನಾಯ್ಡು ಸಂಘಟನೆಗೆ ಸಂಬಂಧಪಟ್ಟ ಜಮೀನ್ದಾರಿ ಗೂಂಡಾಗಳು ಆ ಬಡಪಾಯಿಯನ್ನು ತೀವ್ರವಾಗಿ ಥಳಿಸಿ ಮರಕ್ಕೆ ನೇತುಹಾಕಿದರು. ಕೊನೆಗೆ "ಹಳ್ಳಿಗೆ ಇನ್ನೊಮ್ಮೆ ಬರುವುದಿಲ್ಲವೆಂದು" ಆ ಮನುಷ್ಯ ಘೋಷಿಸಿದ್ದರಿಂದ ಅವನನ್ನು ಗ್ರಾಮದಿಂದ ಹೊರಗೆ ಹೋಗಲು ಅವಕಾಶ ಕೊಡಲಾಯಿತು. ಆ ಕೋರ್ಟ್‌ನ ದೂರಿನ ಆಧಾರದ ಮೇಲೆ ಪೋಲೀಸರು ಈ ಕುಕೃತ್ಯ ಎಸಗಿದವರಲ್ಲೊಬ್ಬನನ್ನು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಈ ಬಂಧನದ ವಿರುದ್ಧ ಸೆಪ್ಟೆಂಬರ್ 18, 1980ರಂದು ನಡೆದ ಪ್ರತಿಭಟನಾ ಸಭೆಯಲ್ಲಿ ನಾಯ್ಡು ಸಂಘಟನೆಯ ನೇತಾರರು ಈ ಕೆಳಕಂಡ ಅಂಶಗಳನ್ನು ಬಹಿರಂಗವಾಗಿ ಘೋಷಿಸಿದರು.

1. "ಜಮೀನು ಹಂಚಿಕೆಗೆ, ವಸತಿಹೀನರಿಗೆ ಸ್ಥಳಗಳ (sites)ನ್ನು ವಿತರಣೆ ಮಾಡಲು ಬರುವ ಕಂದಾಯ ನೌಕರರು ಅಥವಾ ಅಧಿಕಾರಿಗಳನ್ನು ಮತ್ತು ಪೋಲೀಸರನ್ನು ಮರಕ್ಕೆ ನೇತು ಹಾಕಿರಿ. ಸಂಘಟನೆಯ ಕೇಂದ್ರದಿಂದ ಆದೇಶ ಬಂದ ನಂತರ ಮಾತ್ರ ಬಿಡುಗಡೆ ಮಾಡಿ".

2. ಪೋಲೀಸ್ ಪೇದೆಗಳ ತಲೆ ಕಡಿದು ದಾಖಲು ಮಾಡಿಕೊಳ್ಳಿ.... ಇತ್ಯಾದಿ ಇವು ನಾಯಕರ /ಅಣಿಮುತ್ತುಗಳು.

ಇನ್ನೊಂದು ಸನ್ನಿವೇಶದಲ್ಲಿ ಬಿ. ಹೆಚ್. ಇ. ಎಲ್. ಕಾರ್ಮಿಕರ ಕಾಲೋನಿಯ ದಾರಿಯಿಂದ ಸಾಗುತ್ತಿದ್ದ ಪ್ರದರ್ಶನಕಾರರು ಈ ಕೆಳಗಿನ ಘೋಷಣೆಗಳನ್ನು ಕೂಗಿದರು.

"ನಾವು ಕೋಳಿಗಳನ್ನ ಬೆಳೆಸುತ್ತೇವೆ, ನೀವು ತತ್ತಿಗಳನ್ನು ತಿನ್ನುತ್ತೀರಿ", "ದನಗಳನ್ನು ಪಾಲನೆ ಮಾಡುವವರು ನಾವು, ಹಾಲು ಕುಡಿಯುವವರು ನೀವು" ಇತ್ಯಾದಿ.

ಈ ರೀತಿಯಾಗಿ ಕಾರ್ಮಿಕ ವಿರೋಧಿ ಭಾವನೆ ಬೆಳೆಯುವ ಶಿಕ್ಷಣವನ್ನು ಸುವ್ಯವಸ್ಥಿತವಾಗಿ ಕೊಡಲಾಗುತ್ತಿದೆ.

ಜಮೀನ್ದಾರರ ಕೂಟ

ಕೂಥಪ್ಪರ ಎಂಬುದು ತಿರುಚಿ ಜಿಲ್ಲೆಯ ಒಂದು ಗ್ರಾಮ. ಇದು ಬಿ. ಹೆಚ್. ಇ. ಎಲ್. ಕಾರ್ಖಾನೆಗೆ ಸಮೀಪವಿದೆ. ಈ ಹಳ್ಳಿಯಲ್ಲಿ ನಾಯ್ಡು ಸಂಘಟನೆ ಸಮಾನಾಂತರ ಸರಕಾರ ನಡೆಸುತ್ತಿದೆ. ಈ ಹಳ್ಳಿಯ ಪಕ್ಕದಲ್ಲಿ ಕುಮಾರೇಶಪುರಂ ಎಂಬ ಹರಿಜನ ಕೃಷಿಕೂಲಿಕಾರರು ವಾಸಿಸುತ್ತಿರುವ ಚಿಕ್ಕ ಗ್ರಾಮವೊಂದಿದೆ. ಕೂಥಪ್ಪರದ ಜಮೀನ್ದಾರರಿಂದ ಅನುವಂಶಿಕವಾಗಿ ಈ ಹಳ್ಳಿಯ ಜನರ ಶೋಷಣೆ ನಿರಾತಂಕವಾಗಿ ಸಾಗುತ್ತಿತ್ತು. ಬಿ. ಹೆಚ್. ಇ. ಎಲ್. ಸ್ಥಾಪನೆಯಾದ ಮೇಲೆ ಈ ಹರಿಜನ ಕುಟುಂಬಗಳಿಗೆ ಸೇರಿದ ಯುವಕರು ಬಿ. ಹೆಚ್. ಇ. ಎಲ್‌ನಲ್ಲಿ ಕೆಲಸ ದೊರಕಿಸಿಕೊಂಡರು. ಕೂಥಪ್ಪರದ ಭೂಮಾಲೀಕರ ಶೋಷಣೆಯ ವಿರುದ್ಧ ಜಾಗೃತರಾದರು. ಕುಮಾರೇಶಪುರಂ ಹಳ್ಳಿಗೆ ಹೊಂದಿಕೊಂಡಿದ್ದ ಸರಕಾರಿ ಜಾಗದಲ್ಲಿ ಮನೆಗಳಿಗಾಗಿ ಜಾಗಗಳನ್ನು ಕೊಡುವಂತೆ ಕುಮಾರೇಶಪುರಂ ನಿವಾಸಿಗಳು ಅನೇಕ ವರ್ಷಗಳಿಂದ ಜಿಲ್ಲಾಧಿಕಾರಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತಾ ಬಂದಿದ್ದರು. ಈ ಸತತ ಒತ್ತಾಯದ ಫಲವಾಗಿ ನಿವೇಶನಗಳಿಗೆ ಮಂಜೂರಾತಿ ದೊರೆತು ಕಳೆದ ಜೂನ್ 29ರಂದು ಜಿಲ್ಲಾಧಿಕಾರಿಯ ಆದೇಶದ ಮೇರೆಗೆ ನಿವೇಶನಗಳಿಗೆ ಜಾಗ ಗುರುತು ಮಾಡಲು ಸರ್ವೇಯರ್ ಮತ್ತು ಆತನ ಸಿಪಾಯಿ ಬಂದರು.

ಹರಿಜನರ ಮೇಲೆ ಹಲ್ಲೆ

ತಕ್ಷಣ ಕೂಥಪ್ಪರದ ಜಮೀನ್ದಾರರ ಸುಮಾರು 200 ಗೂಂಡಾಗಳು ಧಾವಿಸಿ ಇಬ್ಬರು ಹರಿಜನರನ್ನು ಮರಣಾಂತಿಕವಾಗಿ ಗಾಯಗೊಳಿಸಿ ನಿವೇಶನ ಗುರುತು ಮಾಡಲು ಬಂದ ಸಿಬ್ಬಂದಿಯನ್ನು ಕೂಥಪ್ಪರಕ್ಕೆ ಕೊಂಡೊಯ್ದು 6 ಘಂಟೆಗಳ ಕಾಲ ಖಾಲಿಮನೆಯೊಂದರಲ್ಲಿ ದಿಗ್ಬಂಧನದಲ್ಲಿಟ್ಟರು. ಇಷ್ಟಲ್ಲದೇ ಸೆಬಸ್ಟೀನ್ ಎಂಬ ಹರಿಜನ ಯುವಕನೊಬ್ಬನನ್ನು ಬಂಧಿಸಿದರು. ಅವನನ್ನು ಕೊಲೆಗೈಯಲು ಯೋಜಿಸಲಾಯಿತು. ಸುದೈವದಿಂದ ಆ ಯುವಕ ಬಂಧನದಿಂದ ತಪ್ಪಿಸಿಕೊಂಡನು. ನಾಯ್ಡು ಸಂಘಟನೆಯವರು, "ಸೆಬಾಸ್ಟೀನ್‌ನ ತಲೆ ತಂದವರಿಗೆ ಒಂದು ಎಕರೆ ಜಮೀನು ಮತ್ತು 1000 ರೂ. ಬಹುಮಾನ" ಎಂದು ಡಂಗುರ ಸಾರಿದರು. ಮೂರು ದಿನಗಳ ನಂತರ ಮೂರು ವ್ಯಾನ್‌ಭರ್ತಿ ಪೋಲೀಸರು ಡಿ. ಎಸ್. ಪಿ. ನೇತೃತ್ವದಲ್ಲಿ ಕೂಥಪ್ಪರ ಗ್ರಾಮಕ್ಕೆ ಧಾವಿಸಿ ಸರ್ವೇಯರನ ಮೇಲೆ ಹಲ್ಲೆ ಮಾಡಿದ್ದಕ್ಕಾಗಿ 9 ಜನರನ್ನು ಬಂಧಿಸಿದರು. ತಕ್ಷಣ ಗ್ರಾಮದ ದೇವಸ್ಥಾನದ ಗಂಟೆಯನ್ನು ಬಾರಿಸಿ ಇಡೀ ಗ್ರಾಮದ ನಿವಾಸಿಗಳನ್ನು ಪೋಲೀಸ ಪಡೆಯನ್ನು ಸುತ್ತುವರಿಯುವಂತೆ ಮಾಡಲಾಯಿತು. ಮುಂದಿನ ಸಾಲಿನಲ್ಲಿ ಮಹಿಳೆಯರನ್ನು ನಿಲ್ಲಿಸಿ ಹಿಂದುಗಡೆ ಜಮೀನ್ದಾರರ ಬಂಟರು ತಲೆ ಮರೆಸಿಕೊಂಡಿದ್ದರು.

ಹರಿಜನರ ಹಕ್ಕುಗಳ ರಕ್ಷಣೆಯ ಕ್ಷುಲ್ಲಕ ಕೆಲಸಕ್ಕಾಗಿ ಜಮೀನ್ದಾರರ ಜೀವಗಳನ್ನು ಬಲಿಕೊಡಲು ಇಷ್ಟವಿಲ್ಲವೇನೋ ಎಂಬಂತೆ ಪೋಲೀಸ ಪಡೆ ನಿರ್ಗಮಿಸಿತು. ಈ ಘಟನೆಗೆ ಸಂಬಂಧಿಸಿದಂತೆ ನಾರಾಯಣಸ್ವಾಮಿ ಬಹಿರಂಗ ಸಭೆಯಲ್ಲಿ ಹರಿಜನರಿಗೆ ನಿವೇಶನ ಕೊಡುವುದನ್ನು ವಿರೋಧಿಸಿದರು.

ಸಿ. ಪಿ. ಐ. (ಎಂ) ಮಧ್ಯ ಪ್ರವೇಶ

ತಮಿಳುನಾಡಿನ ವಿಧಾನಸಭೆಯಲ್ಲಿ, ಜಮೀನ್ದಾರರ ಗೂಂಡಾಗಿರಿಯನ್ನು ಪೋಲೀಸರ ನಿಷ್ಕ್ರಿಯತೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಾಸಕ ಕಾಂ. ಆರ್. ಉಮಾನಾಥರು ಉಗ್ರವಾಗಿ ಖಂಡಿಸಿದರಲ್ಲದೇ ತೀವ್ರ ಕ್ರಮಕ್ಕೆ ಮುಖ್ಯಮಂತ್ರಿ ಎಂ. ಜಿ. ರಾಮಚಂದ್ರರನ್ನು ಒತ್ತಾಯಿಸಿದರು. ಮುಖ್ಯಮಂತ್ರಿಯವರು ತಿರುಚಿಯ ಡಿ. ಐ. ಜಿ. ಯನ್ನು ಸಂಪರ್ಕಿಸಿ ಹರಿಜನರಿಗೆ ಸೂಕ್ತ ರಕ್ಷಣೆಕೊಡಲು ಆದೇಶ ನೀಡಿದರು.

ಸರ್ಕಾರ ಹರಿಜನರಿಗೆ ನಿವೇಶನಗಳನ್ನು ನೀಡಲು ಮತ್ತೊಮ್ಮೆ ಪ್ರಯತ್ನಿಸಿದರೂ ಮತ್ತೆ ಜಮೀನ್ದಾರರ ಗೂಂಡಾಗಳಿಂದ ತಡೆಯಲ್ಪಟ್ಟಿತು. ಆದರೆ ಈ ಸಲ ಕೆಲವರನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. ನಾಯ್ಡು ಸಂಘಟನೆ ತನ್ನ ಎಲ್ಲ ಬಲವನ್ನು ಕೂಡಿಸಿ ಜಿಲ್ಲಾಧಿಕಾರಿಯ ಕಚೇರಿ ಎದುರು ಮತಪ್ರದರ್ಶನಕ್ಕೆ ವ್ಯವಸ್ಥೆ ಮಾಡಿತು. ಆದರೆ ಇದು ಫಲಪ್ರದವಾಗಲಿಲ್ಲ.

ಹರಿಜನರಿಗೆ ಸಿ.ಐ.ಟಿ.ಯು. ಬೆಂಬಲ

ಹರಿಜನರಿಗೆ ನಿವೇಶನ ದೊರೆಯಲೇಬೇಕೆಂದು ಒತ್ತಾಯಿಸಿ ಸಿ. ಐ. ಟಿ. ಯು. ಜಿಲ್ಲಾಧಿಕಾರಿಯ ಕಚೇರಿ ಎದುರು ಮತಪ್ರದರ್ಶನ ಮಾಡಿತು. ಈ ಹೋರಾಟ ನಡೆಯುತ್ತಿರುವಾಗಲೇ ಇದರ ಬದಲಾಗಿ ಸೆಪ್ಟೆಂಬರ್ 26ರಂದು ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳ ಕಚೇರಿಗಳ ಎದುರು ಪಿಕೆಟಿಂಗ್ ಮಾಡಲು ನಾರಾಯಣಸ್ವಾಮಿ ನಾಯ್ಡು ಕರೆ ಕೊಟ್ಟರು. ತಮಿಳುನಾಡು ಸಿ. ಐ. ಟಿ. ಯು. ಅಧಿವೇಶನ ಸೆಪ್ಟೆಂಬರ್ 18ರಿಂದ 21ರವರೆಗೆ ಜರುಗಿತು. ಕಾರ್ಮಿಕರು ಹರಿಜನರ ರಕ್ಷಣೆಗೆ ಸೌಹಾರ್ದತಾ ದಿನವನ್ನಾಚರಿಸುವದರ ಮೂಲಕ ನಾರಾಯಣಸ್ವಾಮಿಯ ಸವಾಲನ್ನೆದುರಿಸಲು ತೀರ್ಮಾನಿಸಲಾಯಿತು.

ನಾಯ್ಡು ನಿರ್ಧರಿಸಿದ ಪಿಕೆಟಿಂಗ್ ದಿನವಾದ ಸೆಪ್ಟೆಂಬರ್ 26 ರಂದು ಸಿ. ಐ. ಟಿ. ಯು. ಯೂನಿಯನ್‌ಗಳು ಕಿಸಾನ್ ಸಭಾಗಳು, ಕೃಷಿಕೂಲಿಕಾರರ ಸಂಘಟನೆಗಳು, ಪುರೋಗಾಮಿ ಮಹಿಳಾ ಸಂಘಟನೆಗಳು ಹರಿಜನರಿಗೆ ನಿವೇಶನ ತಕ್ಷಣ ದೊರಕಿಸಲು ಒತ್ತಾಯಿಸಿ ಮುಖ್ಯಮಂತ್ರಿಗೆ ಟೆಲಿಗ್ರಾಮ್‌ಗಳನ್ನು ಕಳಿಸಿದವು. ಸಿ. ಐ. ಟಿ. ಯು. ಸಮ್ಮೇಳನದ ಕರೆಯಂತೆ ಸೆಪ್ಟೆಂಬರ್ 28ರಂದು ರಾಜ್ಯಾದ್ಯಂತ ಹರಿಜನರಿಗೆ ಬೆಂಬಲನೀಡಿ ಧರಣಿ, ಮತಪ್ರದರ್ಶನ ನಡೆಸಲ್ಪಟ್ಟವು.

ಈಗ ಈ ಘಟನೆ ರಾಜ್ಯದಲ್ಲಿ ಎಲ್ಲರ ಗಮನ ಸೆಳೆಯಿತು. ತಿರುಚಿ ಜಿಲ್ಲಾಧಿಕಾರಿ ಕಚೇರಿ ಎದುರು ಸ್ವಯಂ ತಾನೇ ಪಿಕೆಟಿಂಗ್‌ನಲ್ಲಿ ಭಾಗವಹಿಸುವೆನೆಂದು ನಾಯ್ಡು ಸಾರಿದರು. ಆ ಪ್ರಕಾರ ನಡೆದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ ಕೇವಲ 65 ಜನ ಮಾತ್ರ ಪಾಲ್ಗೊಂಡಿದ್ದರು. ಈ ಪಿಕೆಟಿಂಗ್ ಪೂರ್ತಿಯಾಗಿ ವಿಫಲಗೊಂಡಿತು.

ಶೋಚನೀಯ ಸೋಲು

ಮೇಲಿಂದ ಮೇಲೆ ನಡೆದ ವಿಪರೀತ ಪ್ರತಿಕ್ರಿಯೆಗಳಿಂದ ಮಾನಸಿಕ ಸಮತೋಲನ ಕಳೆದುಕೊಂಡ ನಾಯ್ಡು ಅಕ್ಟೋಬರ್ 6 ರಂದು ತಿರುಚಿಯಲ್ಲಿ ಬೃಹತ್ ರ್‍ಯಾಲಿಯನ್ನು ಸಂಘಟಿಸುವ ದಾಗಿ ಘೋಷಿಸಿದರು. ಈ ರ್‍ಯಾಲಿಗೆ ರಾಜ್ಯದ ಎಲ್ಲ ಕಡೆಗಳಿಂದ ತನ್ನ ಬೆಂಬಲಿಗರನ್ನು ಮೇಳವಿಸಲು ನಾಯ್ಡು ಯೋಜಿಸಿದ್ದರಲ್ಲದೇ ನಂತರ ರಾಜ್ಯಾದ್ಯಂತ ಬಂದ್‌ಗೂ ಕಾರ್ಯಕ್ರಮ ಹಾಕಲಾಗಿತ್ತು.

ಅಕ್ಟೋಬರ್ 3ರಂದು ತಿರುಚಿ ಪಟ್ಟಣದಲ್ಲಿ ನಡೆದ ಸುಮಾರು ಒಂದು ಲಕ್ಷ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಕಾಂ. ಉಮಾನಾಥರು ಹರಿ

[7ನೇ ಪುಟ ನೋಡಿ]

ಸಿ.ಪಿ.ಐ.ನ ಅಪಾಲಾಪ

[3ನೇ ಪುಟದಿಂದ]

ಸಿ. ಪಿ. ಐ. ಗೆ ಆಗುವಂತೆ ಸಿ. ಪಿ. ಐ. (ಎಂ)ಗೆ ಏನೂ ಭಯವಾಗುವುದಿಲ್ಲ. ಭಾರತ ಚೀನಾ ಸಂಬಂಧ ಸುಧಾರಣೆಯಿಂದಾಗಿ ಸಿ. ಪಿ. ಐ. ಭಾವಿಸಿರುವಂತೆ ಭಾರತ-ರಷಿಯಾ ಮೈತ್ರಿ, ಸಹಕಾರಗಳು ತನ್ನಿಂತಾನೇ ಕೆಟ್ಟುಹೋಗುವುವೆಂದು ನಾವೇನೂ ಭಾವಿಸುವುದಿಲ್ಲ. ಈ ಬಗೆಯ ಭೀತಿ ಹುಟ್ಟಿಸುವ ಪ್ರಚಾರಕ್ಕೆ ನಾವು ಭಾಗಿಗಳೂ ಅಲ್ಲ; ಹಾಗಾಗಲು ಸಾಧ್ಯವೂ ಇಲ್ಲ. ಭಾರತ ಚೀನಾ ಸಂಬಂಧ ಸುಧಾರಣೆಯಾದ ಮಾತ್ರಕ್ಕೆ ಕೆಟ್ಟುಹೋಗುವಷ್ಟು ಭಾರತ-ರಷ್ಯಾ ಮೈತ್ರಿ ದುರ್ಬಲವಾಗಿಲ್ಲ; ಅಥವಾ ಅಂತಹ ದುರ್ಬಲ ಅಸ್ತಿಭಾರದ ಮೇಲೆ ಅದು ನಿಂತೂ ಇಲ್ಲ. ಸಿ. ಪಿ. ಐ. ಈ ಬಗೆಯ ಭೀತಿಯನ್ನು ಹೊಂದಿರುವ ಮೂಲಕ ಅದು ಭಾರತೀಯ ಜನತೆಯ ಆತ್ಮಗೌರವವನ್ನೇ ಕೀಳಂದಾಜು ಮಾಡುತ್ತಿದೆ; ಅಷ್ಟೇ ಅಲ್ಲ ಇದು ಸಿ. ಪಿ. ಐ. ನ ರಾಜಕೀಯ ಪರಿಜ್ಞಾನದ ಮೇಲೂ ಒಳ್ಳೆಯ ಅಭಿಪ್ರಾಯ ಉಂಟುಮಾಡುವುದಿಲ್ಲ.

ಕೊನೆಯದಾಗಿ ಇದೀಗ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆಗಾಗಿ ಮುನ್ನಡೆಯುತ್ತಿರುವ ಚಳುವಳಿಯ ಹಿತಾಸಕ್ತಿಯ ದೃಷ್ಟಿಯಿಂದಲಾದರೂ ನಮ್ಮ ಸಿ. ಪಿ. ಐ. ಮಿತ್ರರು ನಮ್ಮ ಪಕ್ಷದ ವಿರುದ್ಧ ನಡೆಸುತ್ತಿರುವ ಈ ಅಲ್ಲಸಲ್ಲದ ಅಪಪ್ರಚಾರವನ್ನು ನಿಲ್ಲಿಸುವರೆಂದು ಹಾರೈಸಲೇ?

ಮಂಗಳೂರಿನಲ್ಲಿ ಕಾರ್ಮಿಕಾಧಿಕಾರಿಯವರ ಕಚೇರಿ ಮುಂದೆ ಬೀಡಿ ಮಜೂರರ ಸತ್ಯಾಗ್ರಹ

"1977ರಿಂದ ಬೀಡಿ ಮಜೂರರ ಮಜೂರಿಯಿಂದ ಪ್ರಾವಿಡೆಂಟ್ ಫಂಡಿಗೆ ಕಡಿತವಾದ ಲೆಕ್ಕವು ಈ ತನಕ ದೊರೆಯದಿರುವುದರಿಂದ ಈ ಲೆಕ್ಕವು ಕೂಡಲೇ ದೊರೆಯಬೇಕು. ಪೇ ಸ್ಲಿಪ್ ಕೊಡಬೇಕು, ಎವರೇಜಿನ ಹೆಸರಿನಲ್ಲಿ ಕಂಟ್ರಾಕ್ಟುದಾರರು ದಂಡವಸೂಲಿ ಮಾಡುವುದು ನಿಲ್ಲಬೇಕು, ಶೇಕಡಾ 20ರಷ್ಟು ಬೋನಸ್ಸು ಸಿಗಬೇಕು, ಸಾವಿರ ಬೀಡಿಗೆ 9ರೂ. ಕೂಲಿ ದೊರೆಯಬೇಕು", "ಬೀಡಿ ಮತ್ತು ಸಿಗಾರ ವರ್ಕರ್ಸ್ (ಕಂಡೀಷನ್ ಆಫ್ ಎಂಪ್ಲಾಯ್‌ಮೆಂಟ್) ಆ್ಯಕ್ಟ್, 1966ನ್ನು ಸಂಪೂರ್ಣವಾಗಿ ಜ್ಯಾರಿಗೊಳಿಸಬೇಕು," ಮುಂತಾದ ಬೇಡಿಕೆಗಳು ಈಡೇರುವ ತನಕ ಚಳುವಳಿಯನ್ನು ಹೂಡುವ ನಿರ್ಧಾರವನ್ನು "ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ನಿನ" ಆಶ್ರಯದಲ್ಲಿ ಸೇರಿದ ಬೀಡಿ ಮಜೂರರ ಪ್ರತಿನಿಧಿ ಸಭೆಯು ತೀರ್ಮಾನ ತೆಗೆದುಕೊಂಡು, ದಿನಾಂಕ 22-9-80ರಂದು ಮಾಲೀಕರಿಗೆ ಮನವಿ ಅರ್ಪಿಸಲಾಗಿತ್ತು. ಹಾಗೂ 29-9-80 ರಂದು ಬೃಹತ್ ಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಯವರಿಗೆ ಹಾಗೂ ಮಾಲೀಕರ ಸಂಘದ ಅಧ್ಯಕ್ಷರಿಗೂ ಈ ಬಗ್ಗೆ ತಿಳಿಸಲಾಗಿತ್ತು.

ಆದರೆ ಮಾಲೀಕರೂ, ಸರಕಾರವೂ ನಿಷ್ಕ್ರಿಯವಾಗಿಯೇ ಉಳಿದುದರಿಂದ ಅನಿವಾರ್ಯವಾಗಿ ದಿನಾಂಕ 28-10-80ರಿಂದ 31-10-80ರ ವರೆಗೆ ಕಾರ್ಮಿಕಾಧಿಕಾರಿ ಕಚೇರಿಯೆದುರು ಸಾಮೂಹಿಕ ಸತ್ಯಾಗ್ರಹ ನಡೆಸಲಾಯಿತು.

28-10-80ರಂದು ಮಂಗಳೂರ ಬೀಡಿಕೆಲಸಗಾರರ ಕಾರ್ಯದರ್ಶಿ ಕಾಂ. ವೀರಪ್ಪನವರ ನೇತೃತ್ವದಲ್ಲಿ 300ಕ್ಕೂ ಮಿಕ್ಕ ಕೆಲಸಗಾರರು (ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು), 29-10-80ರಂದು ಅಳಪೆ ಪ್ರದೇಶದ ಬೀಡಿ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಕೆ. ರಂಗಪ್ಪ ಸಾಲಿಯಾನ್‌ರ ನೇತೃತ್ವದಲ್ಲಿ 400ಕ್ಕೂ ಮಿಕ್ಕ ಕಾರ್ಮಿಕರು, ದಿನಾಂಕ 30-10-80ರಂದು ಪದವು ಪ್ರದೇಶ ಬೀಡಿ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಬಾಬು ದೇವಾಡಿಗರ ನೇತೃತ್ವದಲ್ಲಿ ಸುಮಾರು 300ಕ್ಕೂ ಹೆಚ್ಚು ಕಾರ್ಮಿಕರು, ದಿನಾಂಕ 31-10-80ರಂದು ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ನಿನ ಕಾರ್ಯದರ್ಶಿ ಕಾಂ. ಯು. ಬಿ ಲೋಕಯ್ಯನವರ ನೇತೃತ್ವದಲ್ಲಿ 500ಕ್ಕೂ ಹೆಚ್ಚು ಜನ ಕಾರ್ಮಿಕರು ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ನಾಲ್ಕು ದಿನವೂ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಸತ್ಯಾಗ್ರಹ ನಡೆಯಿತು.

ಅದೇ ದಿನ (31-10-80) ಅಸಿಸ್ಟೆಂಟ್ ಕಮೀಷನರವರು ಬಂದು ಮುಖಂಡರೊಡನೆ ಮಾತುಕತೆ ನಡೆಸಿದರು. ವೇತನ ಹೆಚ್ಚಳ ಮತ್ತು ಬೋನಸ್ ಬಗ್ಗೆ ರಾಜ್ಯಮಟ್ಟದಲ್ಲಿ ಮಾಲೀಕರ, ಕಾರ್ಮಿಕ ಪ್ರತಿನಿಧಿಗಳ ಸಭೆಯನ್ನು ನವೆಂಬರ್ 15ರೊಳಗಾಗಿ ಏರ್ಪಡಿಸುವ ವಾಗ್ದಾನವನ್ನು ನೀಡಿದರು. ಪೇ ಸ್ಲಿಪನ್ನು 15 ದಿನಗಳೊಳಗೆ ದೊರಕಿಸಿ ಕೊಡುವ ಮತ್ತು ಇತರ ಬೇಡಿಕೆಗಳ ಬಗ್ಗೆಯೂ ಶೀಘ್ರ ಕ್ರಮಕೈಗೊಳ್ಳುವ ಆಶ್ವಾಸನೆ ನಂತರ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಳ್ಳಲಾಯಿತು.

15 ದಿನಗಳೊಳಗಾಗಿ ಭರವಸೆಯು ಕಾರ್ಯರೂಪಕ್ಕೆ ಬರದಿದ್ದರೆ ಜಿಲ್ಲೆಯಾದ್ಯಂತ ಬೀಡಿ ಮಜೂರರು ತಮ್ಮ ಚಳುವಳಿಯನ್ನು ತೀವ್ರಗೊಳಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ.

○

ನಾರಾಯಣಸ್ವಾಮಿನಾಯ್ಡು : ನಿಜರೂಪ

(6ನೇ ಪುಟದಿಂದ)

ಜನ ವಿರೋಧಿ ನಾಯ್ಡು ವಿರುದ್ಧ ಜನತೆ ಎದ್ದೇಳಲು ವಿನಂತಿಸಿಕೊಂಡರಲ್ಲದೇ ಜಮೀನ್ದಾರಿ ಗೂಂಡಾಗಳ ನೇತೃತ್ವದ ಹಿಡಿತದಿಂದ ಜನರನ್ನು ಪ್ರತ್ಯೇಕಿಸುವಂತೆ ಕರೆಕೊಟ್ಟರು. ಈ ಸಮಾರಂಭದಲ್ಲಿ ಭಾಗವಹಿಸಿದ ಮುಖ್ಯಮಂತ್ರಿಯವರು ನಾರಾಯಣ ಸ್ವಾಮಿ ಸಂಘಟನೆಯ ನಿಜರೂಪವನ್ನು ಬಯಲುಮಾಡಿದ್ದಲ್ಲದೇ ಕುಮಾರೇಶಪುರಂ ಹರಿಜನರಿಗೆ ನ್ಯಾಯದೊರಕಿಸಿಕೊಡಲು ಹೋರಾಡಿದ ಕಾಮ್ರೇಡ್ ಉಮಾನಾಥರಿಗೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೂ ಕೃತಜ್ಞತೆ ಸಲ್ಲಿಸಿದರು.

ಈ ಎಲ್ಲ ಘಟನೆಗಳ ಪರಿಣಾಮವಾಗಿ ಜನರ ಆಕ್ರೋಶಕ್ಕೀಡಾದ ನಾಯ್ಡು ತನ್ನ ಅಕ್ಟೋಬರ್ 6ರ ಬೃಹತ್ ರ್‍ಯಾಲಿಗೆ ಜನರ ಪ್ರತಿಕ್ರಿಯೆ ಗಮನಿಸಿ ತಮ್ಮ ಪ್ರತಿಭಟನೆಯನ್ನು ವಾಪಸ್‌ಪಡೆಯಬೇಕಾಗಿ ಬಂತು. ಇದು ನಾಯ್ಡು ಮತ್ತವರ ಸಂಘಟನೆ ಅನುಭವಿಸಿದ ಪ್ರಥಮ ಸೋಲು.

ದಿಟ್ಟ ನಿಲುವು

ಹರಿಜನ ಕೃಷಿಕೂಲಿಕಾರರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಇತರ ಪಕ್ಷಗಳು ಪ್ರತಿಕ್ರಿಯಿಸದೇ ಇದ್ದುದು ಆಶ್ಚರ್ಯಕರ. ಬಹುಶಃ ಮೇಲ್ವರ್ಗದವರ ಮತಗಳನ್ನು ಕಳೆದುಕೊಳ್ಳುವ ಭಯವಿರಬಹುದೇನೋ? ಜಮೀನ್ದಾರರ ದೌರ್ಜನ್ಯದ ವಿರುದ್ಧ ಧೃಢವಾಗಿ ನಿಂತು ಪ್ರಥಮ ಬಾರಿಗೆ ಹರಿಜನ ಕೃಷಿಕೂಲಿಕಾರರನ್ನು ಬೆಂಬಲಿಸಿ ಕಾರ್ಮಿಕರನ್ನು ಸಂಘಟಿಸಿದ್ದುದರ ಶ್ರೇಯಸ್ಸು ಸಿ.ಐ.ಟಿ.ಯು.ಗೆ ಸಲ್ಲುತ್ತದೆ. ಈ ಬೆಳವಣಿಗೆ ಕಾರ್ಮಿಕ ಚಳುವಳಿಯಲ್ಲಿ ಮೈಲಿಗಲ್ಲು.

○

ಜೆ. ಎನ್. ಯು. ನಲ್ಲಿ ಎಸ್. ಎಫ್. ಐ. ನ ಪ್ರಚಂಡ ವಿಜಯ

ಅಕ್ಟೋಬರ 10ರಂದು ದೆಹಲಿಯ ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ. ಪ್ರಚಂಡ ವಿಜಯಗಳಿಸಿದೆ. ನಾಲ್ಕು ಪದಾಧಿಕಾರಿಗಳಿಗೆ ನಡೆದ ಚುನಾವಣೆಯಲ್ಲಿ ನಾಲ್ಕು ಸ್ಥಾನಗಳನ್ನು ಎಸ್. ಎಫ್. ಐ ತನ್ನದಾಗಿಸಿಕೊಂಡಿದೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಎಸ್. ಎಫ್. ಐ. ಅಭ್ಯರ್ಥಿ ವಿ ಬಾಸ್ಕರ ತಮ್ಮ ಸಮೀಪದ ಅಭ್ಯರ್ಥಿಗಿಂತ 26 ಮತಗಳಿಂದ, ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಅಮರಜೀತ್‌ಸಿಂಗ್, ಸಿರೋಹಿಯವರು 83 ಮತಗಳಿಂದ, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ನಮಿತಾ ಸಿನ್ಹಾ 156 ಮತಗಳಿಂದ ಸಹಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ಮೊಹಮ್ಮದ್ ಹಕ್ರು 168 ಮತಗಳಿಂದ ತಮ್ಮ ತಮ್ಮ ಎದುರಾಳಿಗಳನ್ನು ಸೋಲಿಸಿ ಆಯ್ಕೆಯಾಗಿದ್ದಾರೆ.

ಅಲ್ಲದೆ ಕೌನ್ಸಿಲ್ ಸ್ಥಾನಗಳಿಗೆ 9 ಜನ ಎಸ್ ಎಫ್ ಐ. ನ ಮತ್ತು ಇಬ್ಬರು ಎಸ್. ಎಫ್. ಐ. ಬೆಂಬಲಿತ ಅಭ್ಯರ್ಥಿಗಳು ವಿಜಯಿಗಳಾಗಿದ್ದಾರೆ. ಒಟ್ಟು 27 ಕೌನ್ಸಿಲ್ ಸ್ಥಾನಗಳಲ್ಲಿ 15 ಸ್ಥಾನಗಳನ್ನು ಗಳಿಸಿದ ಎಸ್. ಎಫ್. ಐ. ನಿಚ್ಚಳ ಬಹುಮತ ಹೊಂದಿದೆ.

ಹೊಸದಾಗಿ ಆಯ್ಕೆಹೊಂದಿದ ಜೆ. ಎನ್. ಯು. ವಿದ್ಯಾರ್ಥಿ ಸಂಘ ಸಮಸ್ಯೆಗಳನ್ನೆದುರಿಸುತ್ತಿರುವ ವಿದ್ಯಾರ್ಥಿಗಳನ್ನು, ದೇಶದಲ್ಲಿ ನಡೆಯುತ್ತಿರುವ ಕೋಮು ವಿರೋಧಿ, ಸರ್ವಾಧಿಕಾರಿ ವಿರೋಧಿ ಪ್ರವೃತ್ತಿಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳ ಜೊತೆಗೆ ಹೊಂದಿಕೊಂಡು ಸಂಘಟಿಸುವ ಆಶಯ ಹೊಂದಿದೆ.

●

ಪಾಕಿಸ್ತಾನ ಕಮ್ಯುನಿಸ್ಟ್ ಮುಖಂಡನ ಕಗ್ಗೊಲೆ


ಪಾಕಿಸ್ತಾನ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯ ನಜೀರ್ ಅಬ್ಬಾಸ್, ಪಾಕಿಸ್ತಾನ ಮಿಲಿಟರಿ ಆಡಳಿತದ ಹನ್ನೊಂದು ದಿನದ ಬರ್ಬರ ಚಿತ್ರಹಿಂಸೆಯಿಂದ ಕೊಲ್ಲಲ್ಪಟ್ಟಿದ್ದಾರೆ.

ಕಾಂ ನಜೀರ್ ಕಳೆದ ಜುಲೈ 29 ರಂದು ಜಿಯಾ ಸರಕಾರದಿಂದ ಬಂಧನಕ್ಕೊಳಗಾದರು. ಇವರ ಜೊತೆಯಲ್ಲಿ, ಕರಾಚಿ ಉರ್ದು ವಿಜ್ಞಾನ ಕಾಲೇಜಿನ ಪ್ರೊಫೆಸರ ಜಮಲ್‌ನಾಕ್ವಿ "ಸಿಂಧೂ" ವಾರ್ತಾಪತ್ರದ ಸೊಹೈಲ್ ಸಾಂಗಾಯ್ ಮುಂತಾದವರೂ ಬಂದಿತರಾಗಿದ್ದರು. ಹೊರ ಜಗತ್ತಿಗೆ ಇವರ ಸುಳಿವು ದೊರೆಯಲಿಲ್ಲ. ಆದರೆ ಅವರೆಲ್ಲರೂ ಕಠಿಣ ಚಿತ್ರವಧೆಗೆ ಒಳಪಟ್ಟಿದ್ದರು ಎಂಬುದು ತಿಳಿದುಬಂದಿದೆ.

ಕಳೆದ ವರ್ಷದ ಏಪ್ರಿಲ್‌ನಲ್ಲಿ ಆಫ್‌ಘಾನಿಸ್ಥಾನದಲ್ಲಿ ಯಶಸ್ವಿಯಾದ ಕ್ರಾಂತಿಯನ್ನು ಬೆಂಬಲಿಸುವವರನ್ನು ಪಾಕಿಸ್ತಾನದ ಮಿಲಿಟರಿ ಆಡಳಿತಗಾರರು ಹುಟ್ಟಡಗಿಸಲು ಯತ್ನಿಸುತ್ತಿದ್ದಾರೆ.

ಆದರೆ ಕ್ರೌರ್ಯ ದಬ್ಬಾಳಿಕೆಯಿಂದ ಕ್ರಾಂತಿಕಾರಕ ವಿಚಾರಧಾರೆಯನ್ನು ಹತ್ತಿಕ್ಕಲು ಸಾಧ್ಯವಿಲ್ಲ. 11 ದಿವಸ ಚಿತ್ರಹಿಂಸೆಗೆ ಒಳಪಟ್ಟಿದ್ದರೂ, ಉಪವಾಸದಿಂದ ಬಳಲುತ್ತಿದ್ದರೂ ಕಾಂ. ನಜೀರ್ ಮಿಲಿಟರಿ ಪೈಶಾಚಿಕತೆಗೆ ತಲೆಬಾಗಿಸಲಿಲ್ಲ. ಆಗಸ್ಟ್ 9 ರಂದು ಜರ್ಜರಿತರಾಗಿದ್ದ ಅವರು ವೀರಮರಣವನ್ನಪ್ಪಿ ಹುತಾತ್ಮರಾಗಿದ್ದಾರೆ.

ಕಾಂ.ನಜೀರ್ ಅಬ್ಬಾಸರ ಪಾರ್ಥೀವ ಶರೀರವನ್ನು ಬಂಧು, ಬಾಂಧವರಿಗೆ ತಿಳಿಸದೆ "ಸಾಕ್ಕಿಹಾಸನ್" ಎಂಬಲ್ಲಿರುವ ಸ್ಮಶಾನದಲ್ಲಿ ಹೂಳಿದರು.



ಈ ಮಹಾಕ್ರಾಂತಿಕಾರಿಯ ಸಾವಿನ ಸಮಾಚಾರವನ್ನು ಪತ್ರಿಕೆಯಲ್ಲಿ ಪ್ರಕಟಿಸಲೂ ಅನುಮತಿ ಕೊಡಲಿಲ್ಲ.

ನಜೀರ್ ಅಬ್ಬಾಸರ ಜೊತೆಗೆ ಬಂಧಿತರಾದ ಇತರರೂ ಆಪತ್ತಿನಲ್ಲಿದ್ದಾರೆ. ಜಿಯಾ ಸರಕಾರ ತನ್ನ ಆಡಳಿತಕ್ಕೆ ವಿರುದ್ಧವಾದ ಎಲ್ಲಾ ಚಟುವಟಿಕೆಗಳನ್ನು ಕ್ರೂರವಾಗಿ ಹತ್ತಿಕ್ಕುತ್ತಿದೆ.

ಪಾಕಿಸ್ತಾನ ಮಿಲಿಟರಿ ಆಡಳಿತದವರ ಕ್ರೂರದಬ್ಬಾಳಿಕೆಗೆ ವಿರುದ್ಧವಾಗಿ ಜಗತ್ತಿನ ಎಲ್ಲಾ ಪ್ರಗತಿಪರ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ತಮ್ಮ ಧ್ವನಿಗಳನ್ನು ಒಂದುಗೂಡಿಸಬೇಕೆಂದು ಪಾಕಿಸ್ತಾನದ ಕಮ್ಯುನಿಸ್ಟ್ ಪಕ್ಷ ಕರೆಕೊಟ್ಟಿದೆ.

○

ಪಶ್ಚಿಮ ಬಂಗಾಳದ ಉಪಚುನಾವಣೆ: ಮುಂದೂಡಿದ್ದರ ಬಗ್ಗೆ ಪ್ರತಿಭಟನೆ

ನವೆಂಬರ್ 23ರಂದು ನಿಗದಿಪಡಿಸಿದ್ದ ಪ್ರಕಾರ ನಡೆಯಬೇಕಾಗಿದ್ದ ಚುನಾವಣೆಯನ್ನು ಏಕಾಏಕೀ ಮುಂದೂಡಿದ್ದರ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಉಗ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಪಶ್ಚಿಮ ಬಂಗಾಳದ ವಿಧಾನ ಸಭೆಯ 6 ಸ್ಥಾನಗಳಿಗೆ ಹಾಗೂ ಒಂದು ಲೋಕಸಭಾ ಕ್ಷೇತ್ರದಲ್ಲಿ ನಡೆಯಬೇಕಾಗಿದ್ದ ಉಪಚುನಾವಣೆಯನ್ನು ಚುನಾವಣಾ ಆಯೋಗ ಅನಿರ್ದಿಷ್ಟವಾಗಿ ಮುಂದೂಡಿದೆ. ಈ ಮುಂದೂಡಿಕೆಗೆ ಮುಖ್ಯ ಕಾರಣ ಪಶ್ಚಿಮ ಬಂಗಾಲ ಕಾಂಗ್ರೆ ಅಧ್ಯಕ್ಷನ ನಿರಾಧಾರ ಆರೋಪವೇ ಕಾರಣವಾಗಿದೆ ಮತದಾರರ ಪಟ್ಟಿ ದೋಷಪೂರಿತವಾಗಿದೆ ಎಂಬುದೇ ಈ ಮಹಾಶಯನ ಆರೋಪದ ತಿರುಳು. ಪರಿಷ್ಕರಿಸಿದ ಮತದಾರರ ಪಟ್ಟಿ ಸಿದ್ಧವಾಗಿದ್ದು ಜನವರಿ 1, 1979. ನಂತರ ಚುನಾವಣಾ ಆಯೋಗದ ಆದೇಶದ ಮೇಲೆ ಹೊಸದಾಗಿ ಪರಿಷ್ಕರಿಸಿದ ಮತದಾರರ ಪಟ್ಟಿ ಸಿದ್ಧವಾದುದು ಜನವರಿ 1, 1980, ಕೆಲವೊಂದು ತಕರಾರುಗಳಿದ್ದ ಕಾರಣ ಚುನಾವಣಾ ಆಯೋಗ ಸ್ವಯಂ ತಾನೇ ಒಂದು ನಿಯೋಗವನ್ನು ಕಳಿಸಿ ಈ ದೂರುಗಳನ್ನು ಗಮನಿಸಿ ನಿರಾಧಾರವೆಂದು ಪರಿಗಣಿಸಿ ಮುದ್ರಣಕ್ಕೆ ಆದೇಶ ನೀಡಿದ್ದಿತು.

ಮತದಾರರ ಪಟ್ಟಿ ಸರಿಇದ್ದೂ ಚುನಾವಣಾ ಆಯೋಗ ಚುನಾವಣೆ ನಡೆಸುವ ತನ್ನ ನಿರ್ಧಾರವನ್ನು ಬದಲಿಸಿ ಮುಂದೂಡಿದ್ದುದು ರಾಜಕೀಯ ಒತ್ತಡದಿಂದ ಎಂಬುದು ಸ್ಪಷ್ಟವಾದಂತಾಗಿದೆ.

○

ರೈತ ಹೋರಾಟದಲ್ಲಿ ರಾಜಕೀಯ ಆಪಾದನೆ

(1ನೇ ಪುಟದಿಂದ)

ಶ್ರೀ ರಣಧೀರಸಿಂಗ್ ಅವರೇ "ಆಯೋಗವು ಉತ್ಪಾದನಾ ವೆಚ್ಚವನ್ನು ಲೆಕ್ಕಮಾಡುವ ವಿಧಾನವು ತಪ್ಪು" ಎಂದು ಹೇಳಿದ್ದಾರೆ.

ರೈತ ಜನಾಂಗ ತನ್ನ ಕೃಷಿ ಉತ್ಪನ್ನವನ್ನು ಹೆಚ್ಚಿಸುವುದೇ ಈಗ ಅಪರಾಧವಾಗುತ್ತಿದೆ. ಹಣದುಬ್ಬರ ಸನ್ನಿವೇಶದಲ್ಲಿ ರೈತನನ್ನು ಕಾಪಾಡುವ ಬದಲು ಅದರ ನೆಪ ಹೇಳಿ ಅವನಿಗೆ ಕೊಂತೆ ಮಾಡಲಾಗುತ್ತಿದೆ. ಕೃಷಿ ಆದಾಯದಲ್ಲಿ ಆಗುವ ಹೆಚ್ಚಳವು ಯಾರಿಗೆ ಸೇರುತ್ತಿದೆ? ಬೆಂಬಲ ಬೆಲೆಗಳು ತೀರಾ ಇಳಿದಾಗ ರೈತರು ಕಬ್ಬನ್ನು 77-78ರಲ್ಲಿ ಹೊಲಗಳಲ್ಲೇ ಸುಟ್ಟುಹಾಕಿದ್ದರು. ಆದರೆ ಸಕ್ಕರೆ ಬೆಲೆ ಇಂದು ಏನಾಗಿದೆ? ಬಹಿರಂಗ ಮಾರುಕಟ್ಟೆಯ ಬೆಲೆ 79ರ ವರೆಗೆ 3ರೂ. ಏರಿರಲಿಲ್ಲ ಈಗ ಸರಕಾರ 6 ರೂ ನಿಗದಿ ಮಾಡಿದರೂ ಸಕ್ಕರೆ ಯಾವ ನಗರದಲ್ಲೂ ಸಿಗುತ್ತಿಲ್ಲ. ಕಾಳಸಂತೆ ಸಕ್ಕರೆ ಬೆಲೆಯು ಹತ್ತು ರೂಪಾಯಿಂದ ಹದಿನೆಂಟು ರೂಪಾಯಿವರೆಗೂ ಹೋಗಿದೆ.

ಕಚ್ಚಾ ವಸ್ತುವಿನ ಬೆಲೆ ಮತ್ತು ತಯಾರಾದ ವಸ್ತುವಿನ ಬೆಲೆ ಎರಡಕ್ಕೂ ಇರುವ ಅಗಾಧ ಅಂತರ ಕಬ್ಬು ಸಕ್ಕರೆಗೆ ಮಾತ್ರವಲ್ಲ, ಹತ್ತಿ, ಹತ್ತಿಬಟ್ಟೆ ಸೆಣಬು-ಸೆಣಬು ವಸ್ತುಗಳು, ರಬ್ಬರ್, ತಂಬಾಕು, ಕಡಲೇಕಾಯಿ ಇವುಗಳಿಗೂ ಅನ್ವಯಿಸುತ್ತದೆ. ಹತ್ತಿಯ ಬೆಲೆ 300ರೂ ಎಂದು ಹೇಳಿದರೆ ರೈತರಿಗೆ ಸಿಗುವುದು ಕ್ವಿಂಟಾಲಿಗೆ 250ರೂಗಳೇ ಬಟ್ಟೆಯ ಬೆಲೆ ವಿಪರೀತವಾಗಿ ಏರಿದೆ.

ಸರಕಾರದ ಕೊಳ್ಳುವ ಏಜನ್ಸಿಗಳಾದ ಭಾರತ ಆಹಾರ ಕಾರ್ಪೊರೇಷನ್, ಸೆಣಬು ಕಾರ್ಪೊರೇಷನ್, ಹತ್ತಿ ಕಾರ್ಪೊರೇಷನ್ ಮುಂತಾದವು ಸರಿಯಾದ ಸಮಯದಲ್ಲಿ ಮಾರುಕಟ್ಟೆ ಪ್ರವೇಶಿಸುವುದಿಲ್ಲ ಪರಿಣಾಮಕಾರಿಯಾಗಿ ಕೆಲಸ ಮಾಡಲು 'ಹಣಕಾಸೂ ಇಲ್ಲ. ಇದರಿಂದ ಸಣ್ಣ ಬೆಳೆಗಾರರಿಗೆ ದೊಡ್ಡ ವ್ಯಾಪಾರಿಗಳೇ ಗತಿಯಾಗಿ, ವ್ಯಾಪಾರಿಗಳು ಚೆನ್ನಾಗಿ ಹಣ ಮಾಡುತ್ತಾರೆ. ಒಟ್ಟಿನಲ್ಲಿ ರೈತರಿಗೆ ಲಾಭ ತುಂಬ ಕಡಿಮೆ ಎನ್ನುವದಂತೂ ಸ್ಪಷ್ಟವಾಗುತ್ತದೆ. ಬೇರೆ ವಸ್ತುಗಳ ಬೆಲೆ ಏರುತ್ತಿದೆ. ಹಣದುಬ್ಬರ ಶೇ. 30 ರಷ್ಟು ಹೆಚ್ಚಿದೆ. ಇದು ಕಡಿಮೆಯಾದರೆ ರೈತರು ಬೆಳೆದ ಬೆಳೆಗೂ ಕಡಿಮೆ ಬೆಲೆಯನ್ನು ಒಪ್ಪಿಕೊಳ್ಳಬಹುದು.

ಕೃಷಿ ಉತ್ಪನ್ನ ಮತ್ತು ಕೈಗಾರಿಕಾ ವಸ್ತುಗಳ ಬೆಲೆಯಲ್ಲಿ ಸಮಾನತೆ ತರಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಸಾಮಾನ್ಯ ರೈತ ಎಲ್ಲರಿಂದಲೂ ವಂಚನೆಗೊಳಗಾಗುತ್ತಿರುವನು. ರೈತ ವರ್ಗಕ್ಕೆ ದಿವಾಳಿಯೇ ಗತಿಯಾಗಿದೆ. ತನ್ನ ನೀತಿಗಳಿಂದ ಉಂಟಾದ ಬಿಕ್ಕಟ್ಟನ್ನು ಸರ್ಕಾರ ರೈತರ ತಲೆಯ ಮೇಲೆ ಹೊರಿಸಲೆತ್ನಿಸುತ್ತಿದೆ. ಈ ವಾಸ್ತವಾಂಶಗಳನ್ನು ಗಮನಿಸದೇ ತಮ್ಮ ಅಸ್ತಿತ್ವಕ್ಕೆ ಹೋರಾಡುತ್ತಿರುವ ರೈತರ ಚಳುವಳಿಯು "ರಾಜಕೀಯ ಪ್ರೇರಿತ" ಎಂಬ ಕೃಷಿ ಮಂತ್ರಿಯ ಮಾತು ಸಂಪೂರ್ಣ ಬೇಜವಾಬ್ದಾರಿಯಿಂದ ಕೂಡಿದೆ

ಯೋಗ್ಯಬೆಲೆ ನಿಗದಿ ಮತ್ತು ತೆರಿಗೆ ಹೆಚ್ಚಳದ ವಿರುದ್ಧ ನಡೆಯುತ್ತಿರುವ ಚಳುವಳಿಯಲ್ಲಿ ಸಾವಿರಾರು ಜನಜೈಲಿಗೆ ಹೋದದ್ದು, ಅನೇಕ ಜನ ಜೀವ ಅರ್ಪಿಸಿದ್ದು ಇದೆಲ್ಲ ರಾಜಕೀಯ ಪ್ರೇರಿತವಾದರೆ ಕೆಲವೆಡೆ ಕಾಂಗ್ರೆಸ್ನವರೇ ಚಳುವಳಿಯಲ್ಲಿ ಪಾಲ್ಗೊಂಡದ್ದೂ ರಾಜಕೀಯ ಪ್ರೇರಿತವೇ?

●

ಭಾ. ಜನತಾಪಕ್ಷದ ಅಧ್ಯಕ್ಷರಿಂದ ಗೂಂಡಾಗಿರಿ

"ಆಶಾ ಯಂಗ್ ಸ್ಪೋರ್ಟ್ಸ ಕ್ಲಬ್" (Asha young sports club) ಬೆಳ್ತಂಗಡಿಯ ಒಂದು ಯುವಕ ಸಂಸ್ಥೆ. ಹತ್ತಾರು ವರ್ಷಗಳಿಂದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಜನಾನುರಾಗಿಯಾಗಿದೆ.

ಬೆಳ್ತಂಗಡಿ ಪಕ್ಕದ ಲ್ಯಾಲ ಗ್ರಾಮದ ದಸರಾ ಉತ್ಸವ ಸಮಿತಿಯವರ ಆಹ್ವಾನದ ಮೇರೆಗೆ 17-10-80 ರಂದು ನಾಟಕವೊಂದನ್ನು ಏರ್ಪಡಿಸಲಾಗಿತ್ತು ಹಿಂದಿನ ದಿನ(16-10-80) ಸಂಘದ ನಾಲ್ಕೈದು ಸದಸ್ಯರು ರಂಗ ಸಜ್ಜಿಕೆಯ ಕೆಲಸ ಪೂರೈಸಿ ರಾತ್ರಿ 11 ಘಂಟೆಯ ಸುಮಾರು ಬೆಳ್ತಂಗಡಿ ಮುಖ್ಯ ರಸ್ತೆಯಲ್ಲಿ ಬರುತ್ತಿರುವಾಗ ಬೆಳ್ತಂಗಡಿ ಭಾರತೀಯ ಜನತಾಪಕ್ಷದ ಅಧ್ಯಕ್ಷ ಶ್ರೀ ಹನ್ ವಸಂತ ಬಂಗೇರ ಅವರು ಹತ್ತಾರು ಗೂಂಡಾಗಳೊಂದಿಗೆ ಕಾರಿನಲ್ಲಿ (ಕಾರ್ ನಂ. ಎಂ ಇ ಜಿ 4919) ಕುಡಿದು ಮತ್ತರಾಗಿ ಪ್ರಯಾಣಿಸುತ್ತಿದ್ದವರು ಈ ಯುವಕರನ್ನು ನೋಡಿ ವಾಪಸ್ಸು ಬಂದು ಅಶ್ಲೀಲವಾಗಿ ಬೈದು ಥಳಿಸಿರುವ ಘಟನೆ ವರದಿಯಾಗಿದೆ.

ಭಾರತದ ಮಹಾನ್ ಸಂಸ್ಕೃತಿಯ ಪುನರುತ್ಥಾನಕ್ಕೆ ಕಂಕಣಬದ್ಧರಾಗಿರುವ ಈ ಗೂಂಡಾಗಳ ಕೃತ್ಯ ಖಂಡನೀಯ. ಹಲ್ಲೆಗೀಡಾದ ಯುವಕರು ಪೋಲೀಸ್ ಸ್ಟೇಶನ್‌ಗೆ ಹೋಗಿ ಕಂಪ್ಲೇಂಟ್ ಕೊಟ್ಟರೆ ಅವರನ್ನೇ ದಬಾಯಿಸಿ ಕಳಿಸಲಾಗಿದೆ.

30-10-80ರಂದು ಆಶಾ ಯಂಗ್ ಸ್ಪೋರ್ಟ್ಸ ಕ್ಲಬ್‌ನ ಸರ್ವಸದಸ್ಯರ ಸಭೆ ನಡೆದು ಶ್ರೀ ಜಗನ್ನಾಥ, ರವಿ ಕುಮಾರ್, ಈಶ್ವರಬೈರ, ವಿಶ್ವನಾಥ ಶೆಟ್ಟಿ ಮುಂತಾದವರ ಹಲ್ಲೆ ಮಾಡಿರುವ ವಸಂತ ಬಂಗೇರ ಮತ್ತವರ ಗೂಂಡಾ ಬಳಗದ ಕುಕೃತ್ಯವನ್ನು ಉಗ್ರವಾಗಿ ಖಂಡಿಸಲಾಯಿತು. ○

ಇಂಡಾಲ್ ಆಡಳಿತದ ನಿಜಸ್ವರೂಪ

ಬೆಳಗಾವಿಯ ಇಂಡಾಲ್ ಕಾರ್ಖಾನೆಯ ಬ್ಯಾಲೆನ್ಸ್‌ಶೀಟ್‌ನಲ್ಲಿ ಈ ರೀತಿಯ ವಿವರಗಳು ಇವೆ 1. ಎಕ್ಸೈಸ್ ಡ್ಯೂಟಿ ಮತ್ತು ರೆಗ್ಯುಲೇಷನ್ ಲೆವಿ 50.5 ಕೋಟಿ ರೂ. ಗಳು-ಶೇ 35. 2. ಆದಾಯ ತೆರಿಗೆ 8.2 ಕೋಟಿ-ಶೇ. 6. (ಇವೆರಡೂ ಸರ್ಕಾರಕ್ಕೆ ಸಲ್ಲುವಂಥವು) 3 ಕಚ್ಚಾ ವಸ್ತುಗಳು 24.4 ಕೋಟಿ-ಶೇ. 17. 4. ವಿದ್ಯುತ್ ಮತ್ತು ಇಂಧನ 22.8 ಕೋಟಿ-ಶೇ. 16. 5. ವೇತನಗಳು ಮತ್ತು ಉದ್ಯೋಗಿಗಳ ಭತ್ಯೆಗಳು 12.8 ಕೋಟಿ-ಶೇ. 9. 6. ಇತರೆ ವೆಚ್ಚ 18 ಕೋಟಿ-ಶೇ. 13 (ಇವು ವಾಲ್ಕು ಉತ್ಪಾದನಾ ಮತ್ತು ಮಾರಾಟ ವೆಚ್ಚ) 7. ಮಿಕ್ಕ ಆದಾಯ 17 ಕೋಟಿ-ಶೇ. 1. 8. ಡಿವಿಡೆಂಡ್‌ಗಳು 5.2 ಕೋಟಿ-ಶೇ. 3. (ಇವು ನಿವ್ವಳ ಲಾಭ).

ಕಂಪೆನಿಯು ಒಟ್ಟು ಆದಾಯದಲ್ಲಿ ಶೇ. 3 ರಷ್ಟನ್ನು ಮಾತ್ರ ಉದ್ಯೋಗಿಗಳ ವೇತನಕ್ಕೆ ವೆಚ್ಚ ಮಾಡಿದರೆ, ನಿವ್ವಳ ಲಾಭ ಶೇ 4 ರಷ್ಟಿದೆ. ಕಂಪೆನಿಯ ಇತರೆ ವೆಚ್ಚ ಶೇ. 13 ಇದೆ. ಉದ್ಯೋಗಿಗಳನ್ನು ಯಾವ ಸ್ಥಾನದಲ್ಲಿಟ್ಟಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ.

ಉದ್ಯೋಗಿಗಳ ವೇತನ 1971 ರಿಂದ 1979ರ ಒಳಗೆ ಶೇ. 93 ರಷ್ಟು ಹೆಚ್ಚಿದೆ ಎಂದು ಕಂಪೆನಿ ಹೇಳುತ್ತದೆ. ಆದರೆ ಗ್ರಾಹಕ ಬೆಲೆ ಸೂಚಿಯು ಈ ಅವಧಿಯಲ್ಲಿ ಶೇ. 84 ರಷ್ಟು ಹೆಚ್ಚಿದೆ ಆದ್ದರಿಂದ ನಿಜವಾಗಿ ಉದ್ಯೋಗಿಗಳಿಗೆ ಶೇ. 9 ರಷ್ಟು ಮಾತ್ರ ಹೆಚ್ಚಿಗೆ ಸಿಕ್ಕಂತಾಯಿತು. ಆದರೆ 1969 ರಿಂದ 1979 ರವರೆಗೆ ಕಂಪೆನಿಯ ಲಾಭವು ಶೇ. 350 ರಷ್ಟು ಹೆಚ್ಚಾಗಿದೆ.

ಕಾರ್ಮಿಕರ ಹೋರಾಟಗಳನ್ನು ಬೀಗಮುದ್ರೆ ಮುಂತಾದ್ದರ ಮೂಲಕ ಕಂಪೆನಿಯು ಹೆದರಿಸುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳ ನಿಜಸ್ವರೂಪವನ್ನು ಅರಿತುಕೊಂಡು, ತಮ್ಮಗಿ ಐಕ್ಯತೆಯನ್ನು ಬೆಳೆಸಿಕೊಳ್ಳುವುದು ಕಾರ್ಮಿಕರ ಕರ್ತವ್ಯವಾಗಿದೆ.

ಈ ಹೋರಾಟಗಳ ಫಲವಾಗಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಆಡಳಿತವರ್ಗ ಕೆಲವು ಸೂಚನೆಗಳನ್ನು ಮುಂದಿಟ್ಟಿದೆ ಮತ್ತು ಕೆಲವು ಬೇಡಿಕೆಗಳನ್ನು ಈಡೇರಿಸಲು ಒಪ್ಪಿದೆ.

●

ಕೇಂದ್ರದ ಮಲತಾಯಿ ಧೋರಣೆ

(1ನೇ ಪುಟದಿಂದ)

ರಷ್ಟು ಧಾನ್ಯದ ಬಳಕೆಯ ವರದಿಯನ್ನು ಸಹ ಪಶ್ಚಿಮ ಬಂಗಾಳ ಸರ್ಕಾರ ಗ್ರಾಮೀಣ ಪುನರಾಭಿ ಖಾತೆಗೆ ಸಲ್ಲಿಸಿಲ್ಲ ಎಂಬುದಾಗಿ ಆಪಾದಿಸಲಾಗಿದೆ ಈ ಆಪಾದನೆ ಸತ್ಯಕ್ಕೆ ದೂರವಾದುದಾಗಿದೆ.

ಪಶ್ಚಿಮ ಬಂಗಾಳಕ್ಕೆ 1977-78, 1978-79 ಮತ್ತು 1979-80ರ ಅವಧಿಯಲ್ಲಿ ನೀಡಿದ ಒಟ್ಟು ಧಾನ್ಯದ ವಿತರಣೆಯ ವರದಿಯನ್ನು ಪ ಬಂಗಾಳ ಸರಕಾರ ಜೂನ್ ತಿಂಗಳಲ್ಲೇ ಕೇಂದ್ರಕ್ಕೆ ಸಲ್ಲಿಸಿದೆ ಒಟ್ಟು 416,000 ಟನ್ ಆಹಾರಧಾನ್ಯದಲ್ಲಿ 347,000 ಟನ್‌ಗಳಷ್ಟು ಅಂದರೆ ಶೇ. 84 ರಷ್ಟು ವಿತರಣೆ ಮಾಡಿದ್ದರೂ ಜೂನ್ 11 ರಂದು ರಾಜ್ಯಸಭೆಯಲ್ಲಿ ವ್ಯವಸಾಯ ಮಂತ್ರಿ ರಾವ್‌ಬೀರೇಂದ್ರ ಸಿಂಗರು ವಿತರಣಾ ವರದಿ ಸಲ್ಲಿಸಿಲ್ಲವೆಂದು ಆಪಾದನೆ ಮಾಡಿದ್ದಾರೆ. ಮುಂದಿನ ಕಂತಿನ ಆಹಾರಧಾನ್ಯವನ್ನು ಪ. ಬಂಗಾಳದ ಸರಕಾರಕ್ಕೆ ಒದಗಿಸುತ್ತಿಲ್ಲ ಇದಕ್ಕೆ ಬದಲಾಗಿ ಕಾಂಗ್ರೆಸ್ ನೇತೃತ್ವದ ರಾಜ್ಯಗಳಿಗೆ ಸಂಬಂಧಿಸಿದಂತೆ ಕೇಂದ್ರದ ಧೋರಣೆ ಭಿನ್ನವಾಗಿದೆ.

ಪ. ಬಂಗಾಳ ಎಡರಂಗ ಸರಕಾರದ ವಿರುದ್ಧ ಕೇಂದ್ರದ ಕುತಂತ್ರ ಇಷ್ಟಕ್ಕೇ ಸೀಮಿತವಾಗಿಲ್ಲ ಇದೇ ಅಕ್ಟೋಬರ್ 23 ರಂದು 30,000 ಟನ್ ಆಹಾರಧಾನ್ಯಗಳನ್ನು ಪ. ಬಂಗಾಳಕ್ಕೆ ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮೀಣ ಪುನರಾಭಿವೃದ್ಧಿ ಖಾತೆಯು ಪ್ರಕಟಿಸಿತು. ರಾಜ್ಯಸರಕಾರವು ಈ ಬಗ್ಗೆ ವಿಚಾರಿಸಿದರೆ, "ಇನ್ನೂ ಬಿಡುಗಡೆ ಮಾಡಿಲ್ಲ. ಈ ಫೈಲನ್ನು ಹಣಕಾಸು ಮಂತ್ರಿಗೆ ಕಳಿಸಿದೆ" ಎಂದು ಉತ್ತರ ಬಂದಿತು.

ಕೇಂದ್ರಸರಕಾರದ ದುರುದ್ದೇಶದಿಂದಾಗಿ ಪ. ಬಂಗಾಳದಲ್ಲಿ ಧಾನ್ಯ ವಿತರಣಾ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಕೂಲಿಗಾಗಿ ಕಾಳು (Food for work) ಯೋಜನೆಯ ಹೆಸರಿನ ಬದಲಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಎಂಬ ಹೊಸ ಹೆಸರನ್ನು ಕೇಂದ್ರ ಸರಕಾರ ಕೊಟ್ಟಿದೆ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳಿಗೆ ತೂರದಂತೆ ತಮ್ಮ ಸರ್ವಪ್ರಯತ್ನವನ್ನು ಕಾಂಗ್ರೆಸ್ಸೇತರ ಸರಕಾರಗಳು ಪ್ರಯುಕ್ತಿಸುತ್ತಿವೆ.

●

ಸಾರ್ವತ್ರಿಕ ಮುಷ್ಕರಕ್ಕೆ ಬೀಡಿ ಕೆಲಸಗಾರರ ನಿರ್ಧಾರ

ಕೇರಳ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ಬೀಡಿ ಕಾರ್ಮಿಕರ ಫೆಡರೇಷನ್‌ಗಳ ಜಂಟೀ ಸಭೆಯು ದಿನಾಂಕ 12-11-80ರಂದು ಮಂಗಳೂರಲ್ಲಿ ಜರುಗಿತು. ಕಾಂ. ಪಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು. ಮೂರು ರಾಜ್ಯಗಳಿಂದ 25 ಪ್ರತಿನಿಧಿಗಳು ಭಾಗವಹಿಸಿದ್ದರು ಅಖಿಲ ಭಾರತ ಬೀಡಿ ಮತ್ತು ಸಿಗಾರ್ ವರ್ಕರ್ಸ್ ಕಮಿಟಿಯ ಕಾರ್ಯದರ್ಶಿ ಕಾಂ. ಸಿ. ಕಣ್ಣನ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕಾಂ. ಕಣ್ಣನ್ ಅವರು ಸಭೆಗೆ ವರದಿಯನ್ನು ವಿವರಿಸುತ್ತಾ, ದೇಶದ ಲಕ್ಷಾಂತರ ಬೀಡಿ ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಭೆಯ ಗಮನ ಸೆಳೆದರು. ಬೀಡಿಕಾರ್ಮಿಕರು ಸರ್ಕಾರ ಮತ್ತು ಮಾಲೀಕರಿಬ್ಬರಿಂದಲೂ ಸುಲಿಗೆಗೆ ಒಳಗಾಗಿರುವ ದುಸ್ಥಿತಿಯ ಬಗ್ಗೆ ತಿಳಿಸಿದರು. ವರದಿ ಮೇಲೆ ನಡೆದ ಚರ್ಚೆಯಲ್ಲಿ ತಮಿಳುನಾಡಿನ ಕಾಂ. ವಿ. ಕಣ್ಣನ್, ಕೇರಳದ ಕಾಂ ಪಿ. ವಿ. ಕುಟ್ಟಿ, ಕರ್ನಾಟಕದ ಕಾಂ. ಲೋಕಯ್ಯ, ಕಾಂ. ಮಾಸಬ್ಬ ಮತ್ತು ಕಾಂ. ಯುನೂಸಖಾನ್ ಮತ್ತಿತರರು ಪಾಲ್ಗೊಂಡರು.

ಸುದೀರ್ಘ ಚರ್ಚೆಯ ನಂತರ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟಕ್ಕೆ ಸಿದ್ಧತೆ ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಬೇಡಿಕೆಗಳು :

1. 1000 ಬೀಡಿಗೆ 12 ರೂ. ಯಂತೆ ಕೂಲಿ ತಕ್ಷಣ ದೊರೆಯಬೇಕು.
2. ಬೀಡಿ ಎಲೆಗೆ ಇಂತಿಷ್ಟು ಎಂದು ಎವರೇಜನ್ನು ನಿರ್ಧರಿಸುವ ಪದ್ಧತಿ ಹೋಗಬೇಕು.
3. ಯಾವುದೇ ನೆಪದಿಂದ ಕಾರ್ಮಿಕರ ಕೂಲಿಯಲ್ಲಿ ಕಡಿತ ಮಾಡಬಾರದು.
4. ಬೀಡಿ ಮತ್ತು ಸಿಗಾರ್ ವರ್ಕರ್ಸ್ (ಕಂಡೀಷನ್ ಆಫ್ ಎಂಪ್ಲಾಯ್ಮೆಂಟ್) ಆಕ್ಟ 1966ನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕು.

ಈ ಮೇಲ್ಕಂಡ ಬೇಡಿಕೆಗಳ ಈಡೇರಿಕೆಗಾಗಿ ಫೆಡರೇಷನ್‌ಗೆ ಸೇರಿ ಬೀಡಿ ಸಂಘಟನೆಗಳು ಡಿಸೆಂಬರ್ 1 ರಂದು ಆಡಳಿತವರ್ಗಗಳಿಗೆ ನೋಟಿಸ್‌ಕೊಟ್ಟು ಮೂರು ರಾಜ್ಯಗಳಲ್ಲಿ ಡಿಸೆಂಬರ್ 17 ರಂದು ಒಂದು ದಿನದ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧರಾಗುವಂತೆ ಕರೆ ನೀಡಲಾಯಿತು.

ಮಲಬಾರ ಪ್ರಾಂತ ಮತ್ತು ದ. ಕ ಜಿಲ್ಲೆಯಲ್ಲಿ ಜಂಟೀ ಸಮಿತಿಯು ಬೇಡಿಕೆಗಳ ಪೂರೈಕೆಗಾಗಿ ಹೋರಾಟವನ್ನು ಯಶಸ್ವಿಯಾಗಿಮಾಡಲು ಕಾರ್ಯಕ್ರಮ ಹಾಕಿಕೊಳ್ಳಲಿದೆ. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT